# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ಅಮೆರಿಕಾದ ಹೂಸ್ಟನ್ ನಗರದಲ್ಲಿ ಹಾರ್ವೇ ಚಂಡಮಾರುತದಿಂದ ಸಂತ್ರಸ್ತರಾದವರಿಗೆ ಪರಿಹಾರ ಸಾಮಗ್ರಿ ವಿತರಣೆಯ ತಯಾರಿ ನಡೆಸುತ್ತಿರುವ ಸೇವಾ ಇಂಟರ್‌ನ್ಯಾಷನಲ್ ಸಂಸ್ಥೆಯ ಸ್ವಯಂಸೇವಕರು. ಅಮೆರಿಕಾದಲ್ಲಿರುವ ಭಾರತೀಯರು ನಡೆಸುತ್ತಿರುವ ಈ ಸಂಸ್ಥೆಯ ಸೇವಾಕಾರ್ಯಕ್ಕೆ ಎಲ್ಲೆಡೆ ಪ್ರಶಂಸೆ ವ್ಯಕ್ತವಾಗುತ್ತಿದೆ.


ಸಂಪುಟ : 39 ಸಂಚಿಕೆ : 3 ಹೇಮಲಂಬಿ–ಭಾದ್ರಪದ ಕಲಿಯುಗಾಬ್ದ 5119 15–9–2017 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


# ತ್ರಿವಳಿ ತಲಾಖ್ ನಿಷೇಧ

## ಮುಸ್ಲಿಂ ವೈಯಕ್ತಿಕ ಕಾನೂನು ಸುಧಾರಣೆಯ ಮೊದಲ ಹೆಜ್ಜೆ

ಕಳೆದ ಆಗಸ್ಟ್ 22ರಂದು ಸರ್ವೋಚ್ಚ ನ್ಯಾಯಾಲಯವು ಭಾರತದ ಮುಸಲ್ಮಾನ ಸಮಾಜದಲ್ಲಿ ಆಚರಣೆಯಲ್ಲಿದ್ದ ತ್ರಿವಳಿ ತಲಾಖ್ ಅನ್ನು ನಿಷೇಧಿಸಿತು. ಈ ಆಚರಣೆಯು ಮುಸಲ್ಮಾನ ಮಹಿಳೆಯರ ಮೂಲಭೂತ ಹಕ್ಕುಗಳನ್ನು ಅತಿಕ್ರಮಿಸುತ್ತದೆ ಎಂದು ಅದು ಹೇಳಿತು. ವಿವಿಧ ಮತಗಳಿಗೆ ಸೇರಿದ ಐದು ಜನ ನ್ಯಾಯಾಧೀಶರ ಪೀಠದಲ್ಲಿದ್ದ ಮೂವರು ನ್ಯಾಯಾಧೀಶರು ತ್ರಿವಳಿ ತಲಾಖನ್ನು ಕಾನೂನುಬಾಹಿರ ಎಂದು ಹೇಳುವ ಮೂಲಕ ಬಹುಮತದ ತೀರ್ಪು ಬಂದಿದೆ. ಇದರಿಂದ ಭಾರತದಲ್ಲಿ ತ್ರಿವಳಿ ತಲಾಖ್ ನಿಷೇಧ ಜಾರಿಗೊಂಡಿದೆ. ಇಬ್ಬರು ನ್ಯಾಯಾಧೀಶರು ಮಾತ್ರ ಸರ್ಕಾರ ಇದಕ್ಕೆ ಕಾನೂನು ಮಾಡುವುದು ಸೂಕ್ತ ಎಂದು ಹೇಳಿದರು.




### ಸುಪ್ರೀಂ ಕೋರ್ಟಿನಲ್ಲಿದ್ದ ಪ್ರಕರಣವೇನು?


ತ್ರಿವಳಿ ತಲಾಖ್ ಸಂಪ್ರದಾಯವು ಭಾರತದ ಮುಸಲ್ಮಾನರ ಸುನ್ನಿ ಪಂಗಡದಲ್ಲಿ ಕಳೆದ 1000 ವರ್ಷಗಳಿಂದ ಆಚರಣೆಯಲ್ಲಿದೆ. ಈ ಪದ್ಧತಿಯ ಪ್ರಕಾರ, ಮುಸಲ್ಮಾನ ಪುರುಷನು ಮೂರು ಸಲ 'ತಲಾಖ್' ಎಂದು ಉಚ್ಚರಿಸುವ ಮೂಲಕ ತನ್ನ ಪತ್ನಿಗೆ ವಿಚ್ಛೇದನ ನೀಡಬಹುದು. 2016ರ ಫೆಬ್ರವರಿಯಲ್ಲಿ ಶಾಯರಾ ಬಾನು ಎಂಬ ಹೆಸರಿನ ಮುಸಲ್ಮಾನ ಮಹಿಳೆ ತ್ರಿವಳಿ ತಲಾಖ್ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದಳು. 2015ರ ಅಕ್ಟೋಬರ್‌ನಲ್ಲಿ ಆಕೆಯ ಪತಿ ತಲಾಖ್ ಎಂದು ಮೂರು ಬಾರಿ ಉಚ್ಚರಿಸುವ ಮೂಲಕ ಅವಳಿಗೆ ವಿಚ್ಛೇದನ ನೀಡಿದ್ದ. ಈ ಮೂಲಕ 13 ವರ್ಷಗಳ ವೈವಾಹಿಕ ಜೀವನ ಕ್ಷಣದಲ್ಲಿ ಉರುಳಿ ಬಿದ್ದಿತ್ತು.

ಇದು ಇವಳೊಬ್ಬಳ ಕಥೆಯಲ್ಲ. ಉತ್ತರಾಖಂಡ ರಾಜ್ಯವೊಂದರಲ್ಲಿಯೇ ತ್ರಿವಳಿ ತಲಾಖ್‌ಗೆ ಸಂಬಂಧಿಸಿದ 10,430 ದಾವೆಗಳಿವೆ. ಲಕ್ಷಾಂತರ ಮುಸಲ್ಮಾನ ಹೆಂಗಸರು ಈ ಪದ್ಧತಿಯಿಂದ ತಾರತಮ್ಯಕ್ಕೆ, ಅಪಮಾನಕ್ಕೆ ತುತ್ತಾಗಿರುವರು ಮತ್ತು ಅವರ ಜೀವನವೇ ಮುರಿದು ನಾಶವಾಗಿದೆ. ಈ ರೀತಿಯ ದಾವೆಯು ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂದಿರುವುದು ಇದೇ ಮೊದಲ ಸಲವಲ್ಲ. 1985ರಲ್ಲಿ ಶಹಾ ಬಾನೋ ಎಂಬ ಮಹಿಳೆಯ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಶಹಾ ಬಾನೋ ಪರವಾಗಿ ತೀರ್ಪು ನೀಡಿತ್ತು. ಆಕೆಗೆ 1932ರಲ್ಲಿ ವಿವಾಹವಾಗಿತ್ತು. ಐವರು ಮಕ್ಕಳಿದ್ದ ಆಕೆಯನ್ನು ಆಕೆಯ ಪತಿ 1978ರಲ್ಲಿ ತ್ರಿವಳಿ ತಲಾಖ್ ನೀಡುವ ಮೂಲಕ ವಿಚ್ಛೇದಿಸಿದ್ದ. ವಿಚ್ಛೇದನ ನೀಡಿದ ಪತಿಯು ತನಗೆ 200 ರೂಪಾಯಿ ಮಾಸಾಶನ ನೀಡಬೇಕೆಂದು ಆಕೆ ನ್ಯಾಯಾಲಯದ ಮೊರೆ ಹೋಗಿದ್ದಳು. ಸ್ಥಳೀಯ ನ್ಯಾಯಾಲಯದಲ್ಲಿ ಪ್ರಾರಂಭವಾದ ಕಾನೂನು ಸಮರ ಸರ್ವೋಚ್ಚ ನ್ಯಾಯಾಲಯ ತಲುಪಿತು. 1985ರಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿನಲ್ಲಿ, ಆಕೆಯ ಪತಿಯು ಆಕೆಗೆ ಮಾಸಾಶನ ನೀಡುವುದು ನ್ಯಾಯವಾಗಿದೆ ಎಂದು ತೀರ್ಪಿತ್ತಿತು. ಆದರೆ, ಆಗ ಕೇಂದ್ರದಲ್ಲಿ ಆಳುತ್ತಿದ್ದ ರಾಜೀವ್ ಗಾಂಧಿ ಸರಕಾರವು 1986ರಲ್ಲಿ ಸಂಸತ್ತಿನಲ್ಲಿ ಕಾನೂನು ತಿದ್ದುಪಡಿ ಮಾಡುವ ಮೂಲಕ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅಮಾನ್ಯ ಮಾಡಿತು.

> ತ್ರಿವಳಿ ತಲಾಖಿನಂತೆಯೇ ಮುಸಲ್ಮಾನರಲ್ಲಿರುವ ಮತ್ತೊಂದು ಅಮಾನವೀಯ ಪದ್ಧತಿ ಬಹುಪತ್ನಿತ್ವ. ಮುಸಲ್ಮಾನ ಪುರುಷನು ನಾಲ್ವರು ಪತ್ನಿಯರನ್ನು ಏಕಕಾಲದಲ್ಲಿ ಹೊಂದಿರಬಹುದು. ಇದು ಕೂಡಾ ಮಹಿಳೆಯರನ್ನು ತುಚ್ಛೀಕರಿಸುವ ಪದ್ಧತಿಯೇ ಆಗಿದೆ. ಇದರಿಂದಲೂ ಮುಸಲ್ಮಾನ ಮಹಿಳೆಯರಿಗೆ ಅನ್ಯಾಯವಾಗುತ್ತಿದೆ. ಈ ರೀತಿಯ ಎಲ್ಲ ಅಮಾನವೀಯ ಪದ್ಧತಿಗಳೂ, ಕುರೂಢಿಗಳೂ ತೊಲಗಬೇಕು. ನಾಗರಿಕ ಸಮಾಜದಲ್ಲಿ ಅವುಗಳಿಗೆ ಸ್ಥಾನವಿಲ್ಲ.

ಇದೀಗ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪು ಮುಸ್ಲಿಂ ಮಹಿಳೆಯರಿಗೆ ಸಮಾನತೆ ದೊರಕಿಸಿಕೊಡುವ ನಿಟ್ಟಿನಲ್ಲಿ ಐತಿಹಾಸಿಕವಾಗಿದೆ. ಈ ಹಿನ್ನೆಲೆಯಲ್ಲಿ ನಾವು ಗಮನಿಸಬೇಕಾದ ಕೆಲವು ಅಂಶಗಳು ಇಲ್ಲಿವೆ.

- ತ್ರಿವಳಿ ತಲಾಖ್ ಎನ್ನುವುದು ಜಗತ್ತಿನ ಪ್ರಮುಖ ಮುಸಲ್ಮಾನ ದೇಶಗಳಲ್ಲಿ ನಿಷೇಧಿತವಾಗಿದೆ. ಪಾಕಿಸ್ತಾನ, ಬಾಂಗ್ಲಾದೇಶ, ಟರ್ಕಿ, ಈಜಿಪ್ಟ್, ಮಲೇಶಿಯಾ, ಇಂಡೋನೇಷಿಯಾ, ಯುಎಇ, ಮುಂತಾದ 21 ಪ್ರಮುಖ ಮುಸಲ್ಮಾನ ರಾಷ್ಟ್ರಗಳು ತ್ರಿವಳಿ ತಲಾಖ್ ನಿಷೇಧಿಸಿವೆ.
- ಮುಸಲ್ಮಾನರ ವೈಯಕ್ತಿಕ ಕಾನೂನಿನಲ್ಲಿ ತಲೆ ತೂರಿಸಬಾರದು ಎಂದು ಮುಸ್ಲಿಂ ವೈಯಕ್ತಿಕ ಕಾನೂನು ಬೋರ್ಡ್ ಪರ ವಕೀಲ ಕಾಂಗ್ರೆಸ್ ರಾಷ್ಟ್ರೀಯ ನಾಯಕ ಕಪಿಲ್ ಸಿಬಲ್ ಸರ್ವೋಚ್ಚ ನ್ಯಾಯಾಲಯದ ಮುಂದೆ ವಾದಿಸಿದ್ದರು. ಖುರಾನ್ ಮತ್ತು ಹದೀಸ್ ಗ್ರಂಥಗಳಲ್ಲಿ ನಮೂದಿಸಿರುವುದು ಮಾತ್ರ ಮುಸಲ್ಮಾನರ ವೈಯಕ್ತಿಕ ಕಾನೂನಿನ ಅಡಿ ಬರುತ್ತದೆ. ತ್ರಿವಳಿ ತಲಾಖ್ ಎನ್ನುವುದು ಮುಸಲ್ಮಾನ ಸಮಾಜದಲ್ಲಿ ರೂಢಿಯಲ್ಲಿರುವ ಪದ್ಧತಿಯೇ ಹೊರತು ಮತಕ್ಕೆ ಸಂಬಂಧಿಸಿದ್ದಲ್ಲ.
- ಈ ಪದ್ಧತಿಯು ಕನಿಷ್ಠ 1000 ವರ್ಷಗಳಿಂದ ಆಚರಣೆಯಲ್ಲಿರುವುದರಿಂದ ಇದು ಮುಸಲ್ಮಾನರ ಭಾವನೆಗಳಿಗೆ ಸಂಬಂಧಿಸಿದ್ದು ಎಂದು ಕಪಿಲ್ ಸಿಬಲ್ ವಾದಿಸಿದ್ದರು. ಸಹಸ್ರಾರು ವರ್ಷಗಳಿಂದ ರೂಢಿಯಲ್ಲಿರುವ ಆಚರಣೆ ಎಂಬ ಮಾತ್ರಕ್ಕೆ ಅಮಾನವೀಯ ಆಚರಣೆಗಳನ್ನು ಮುಂದುವರಿಸುವ ಆವಶ್ಯಕತೆಯಿಲ್ಲ. ಹಿಂದು ಸಮಾಜದಲ್ಲಿ ರೂಢಿಯಲ್ಲಿದ್ದ ಬಾಲ್ಯ ವಿವಾಹ, ಸತಿ ಪದ್ಧತಿ, ಇತ್ಯಾದಿ ಕುರೂಢಿಗಳನ್ನು ಅಮಾನವೀಯ ಎಂಬ ಕಾರಣಕ್ಕೆ ತೊಲಗಿಸಲಾಗಿದೆ. ತ್ರಿವಳಿ ತಲಾಖ್ ಕೂಡಾ ಇಂತಹ ಅಮಾನವೀಯ ಪದ್ಧತಿಯೇ ಆಗಿದೆ.
- ಈ ಹಿಂದೆ ದೂರವಾಣಿಯ ಮೂಲಕ, ಎಸ್ಸೆಮ್ಮೆಸ್ ಕಳಿಸುವ ಮೂಲಕವೂ ತಲಾಖ್ ನೀಡಿರುವುದು ವರದಿಯಾಗಿದೆ. ಮುಸಲ್ಮಾನ ಪುರುಷರು ತಮ್ಮ ಪತ್ನಿಯರನ್ನು ಇಷ್ಟು ಕೆಟ್ಟದಾಗಿ ನೋಡಿಕೊಳ್ಳುವುದು ಅವರ ಸಮಾಜಕ್ಕೇ ಅಪಮಾನಕರ ಮತ್ತು ತಲೆತಗ್ಗಿಸುವಂತಹ ಸಂಗತಿಯಾಗಿದೆ. ಮುಸಲ್ಮಾನ ಮಹಿಳೆಯರಿಗೂ ಪುರುಷರಷ್ಟೇ ಹಕ್ಕುಗಳನ್ನು ಸಂವಿಧಾನವು ದಯಪಾಲಿಸಿದೆ. ಆದರೆ, ಮುಸಲ್ಮಾನ ವೈಯಕ್ತಿಕ ಕಾನೂನು ಇದಕ್ಕೆ ಅಡ್ಡಿಯಾಗಿದೆ.
- ನ್ಯಾಯಾಲಯಗಳಲ್ಲಿ ಸಹಸ್ರಾರು ಮುಸಲ್ಮಾನ ಮಹಿಳೆಯರು ಈ ತ್ರಿವಳಿ ತಲಾಖ್ ವಿರುದ್ಧ ಮತ್ತು ವಿಚ್ಛೇದಿತ ಪತ್ನಿಯರಿಗೆ ಪತಿಯು ಮಾಸಾಶನ ನೀಡಬೇಕೆಂದು ಕೋರಿ ದಾವೆಗಳನ್ನು ಹೂಡಿದ್ದಾರೆ.
- 2015ರಿಂದ ಭಾರತೀಯ ಮುಸ್ಲಿಂ ಮಹಿಳಾ ಆಂದೋಳನ್ ಎಂಬ ಸಂಘಟನೆಯು ಈ ಪದ್ಧತಿಯನ್ನು ತೊಲಗಿಸಲು ಹೋರಾಡುತ್ತಿದೆ. ಪ್ರಧಾನಿ ನರೇಂದ್ರ ಮೋದಿಯವರೂ ತ್ರಿವಳಿ ತಲಾಖನ್ನು ನಿಷೇಧಿಸಬೇಕೆಂದು ಸಾರ್ವಜನಿಕ ಹೇಳಿಕೆಯನ್ನು ಈ ಹಿಂದೆಯೇ ನೀಡಿದ್ದರು.
- ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ತ್ರಿವಳಿ ತಲಾಖ್ ಹೋಗಕೂಡದೆಂದು ಹೋರಾಡಿತು. ಅವರ ಪರವಾಗಿ ವಾದಿಸಿದವರು ಕಾಂಗ್ರೆಸ್ಸಿನ ರಾಷ್ಟ್ರಮಟ್ಟದ ನಾಯಕರಾದ ಕಪಿಲ್ ಸಿಬಲ್.
- ಬಹುಪತ್ನಿತ್ವವೂ ಆಗಿನ ಕಾಲದ ಒಂದು ಸಾಮಾಜಿಕ ಪದ್ಧತಿಯಾಗಿತ್ತೇ ಹೊರತು ಅದಕ್ಕೆ ಇಸ್ಲಾಮಿನಲ್ಲಿ ಯಾವುದೇ ಮಾನ್ಯತೆಯಿಲ್ಲ ಎಂದು ಕೇಂದ್ರ ಸರ್ಕಾರದ ಅಟಾರ್ನಿ ಜನರಲ್ ಮುಕುಲ್ ರೋಹಟಗಿ ಕೋರ್ಟಿಗೆ ಸಲ್ಲಿಸಿರುವ ಅಫಿಡವಿಟ್ ನಲ್ಲಿ ಹೇಳಿರುವುದು ಒಂದು ಒಳ್ಳೆಯ ಬೆಳವಣಿಗೆ.
- ಮುಂದೆ ಇದೇ ತೀರ್ಪನ್ನು ಆಧಾರವಾಗಿಟ್ಟುಕೊಂಡು ಮುಸ್ಲಿಂ ವೈಯಕ್ತಿಕ ಕಾನೂನಿನ ಹಲವು ಅಂಶಗಳನ್ನು (ಬಹುಪತ್ನಿತ್ವ, ಆಸ್ತಿ ಹಕ್ಕು ಮೊದಲಾದವು) ಮುಸ್ಲಿಂ ಮಹಿಳೆಯರು ಕೋರ್ಟಿನಲ್ಲಿ ಪ್ರಶ್ನಿಸುವ ಸಾಧ್ಯತೆಗಳು ದಟ್ಟವಾಗಿವೆ. ಮುಸ್ಲಿಂ ಮಹಿಳೆಯರ ಸಮಾನತೆಯ ಹೋರಾಟಕ್ಕೆ ಸಿಕ್ಕ ಈ ಜಯದಿಂದ ಮುಂದಿನ ದಿನಗಳಲ್ಲಿ ಈ ಹೋರಾಟ ಇನ್ನೂ ಬಲಗೊಳ್ಳಲಿದೆ ಎಂಬುದಂತೂ ಸತ್ಯ.
- ಭಾರತವು ಜಾತ್ಯತೀತ ದೇಶವಾಗಿದೆ. ಇಲ್ಲಿ ಪ್ರತಿಯೊಂದು ಮತಕ್ಕೂ ತನ್ನದೇ ಆದ ವೈಯಕ್ತಿಕ ಕಾನೂನು ಇರುವುದು ಜಾತ್ಯತೀತ ಸಂಹಿತೆಗೆ ವಿರುದ್ಧವಾಗಿದೆ. ಭಾರತವು ನಿಜ ಅರ್ಥದಲ್ಲಿ ಜಾತ್ಯತೀತ ಎನಿಸಬೇಕಾದರೆ, ಎಲ್ಲರಿಗೂ ಸಮಾನ ಕಾನೂನು ಜಾರಿಗೆ ಬರಬೇಕು. ಭಾರತದ ಸಂವಿಧಾನವೂ ಸಮಾನ ನಾಗರಿಕ ಸಂಹಿತೆ ಆಚರಣೆಗೆ ಬರಬೇಕೆಂದು ಆಶಿಸಿದೆ.
- ಆ ದಿಕ್ಕಿನಲ್ಲಿ ಸುಪ್ರೀಂ ಕೋರ್ಟಿನ ಈ ತೀರ್ಪು ಒಂದು ಮಹತ್ತ್ವದ ಹೆಜ್ಜೆಯಾಗಿದೆ. ಒಂದೊಂದು ಮತದವರಿಗೆ ಒಂದೊಂದು ಕಾನೂನೆಂಬ ಈಗಿನ ಸ್ಥಿತಿಯಿಂದ ಹೊರಬಂದು, ಸಮಾನ ನಾಗರಿಕ ಸಂಹಿತೆಯನ್ನು ಜಾರಿಗೆ ತರುವ ಮೂಲಕ ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂದು ಘೋಷಿಸಲು ಇದು ಸಕಾಲ. ರಾಷ್ಟ್ರೀಯ ಸ್ವಯಂಸೇವಕ ಸಂಘವೂ ಸೇರಿದಂತೆ ಸಾಮಾಜಿಕ ಕಳಕಳಿಯಿರುವ ಅನೇಕ ಸಂಘ–ಸಂಸ್ಥೆಗಳು ಕಳೆದ ಕೆಲವು ದಶಕಗಳಿಂದ ಈ ಬೇಡಿಕೆಯನ್ನು ಮುಂದಿಡುತ್ತಲೇ ಬಂದಿವೆ.



# ದೀನ್‌ದಯಾಳ್‌ಜೀ ಸ್ಮರಣೆ

1947 ರಲ್ಲಿ ಸ್ವಾತಂತ್ರವೇನೋ ದೊರಕಿತ್ತು ಅದರೊಂದಿಗೆ ದೇಶ ವಿಭಜನೆಯ ಕರಾಳ ಅಧ್ಯಾಯವೂ ಪ್ರಾರಂಭವಾಗಿತ್ತು. ಸ್ವತಂತ್ರಗೊಳ್ಳುವ ಮೊದಲು ಪ್ರಭಾವಿಯಾಗಿದ್ದ ರಾಜಕೀಯ ಸಂಘಟನೆಯಾದ ಕಾಂಗ್ರೆಸ್ ಕೂಡ ಬ್ರಿಟಿಷರ ಕುಟಿಲ ನೀತಿಯಿಂದ ಉಗಮವಾದ ಮುಸ್ಲಿಂ ಲೀಗ್‌ನ ಉಗ್ರ ಮತೀಯವಾದಕ್ಕೆ ಮಣಿದು ಶರಣಾಗಿತ್ತು. ಅಧಿಕಾರ ಪ್ರಾಪ್ತಿಯಿಂದಾಗಿ ಕಾಂಗ್ರೆಸ್‌ನ ರಾಜಕೀಯ ನಾಯಕರ ಸ್ವಹಿತಾಸಕ್ತಿ, ದುರಾಡಳಿತ ಹಾಗೂ ಭ್ರಷ್ಟಾಚಾರ ತಾರಕಕ್ಕೇರಿತ್ತು. ಆರ್ಥಿಕ ಬೆಳವಣಿಗೆಯ ತರಾತುರಿಯ ನಿರ್ಣಯಗಳಿಂದ ದೇಶದ ಹಣಕಾಸು ಪರಿಸ್ಥಿತಿ ಹದಗೆಡುತ್ತಿತ್ತು. ರಾಷ್ಟ್ರೀಯತೆಯ ವಿಚಾರಗಳನ್ನು ಎತ್ತಿ ಹಿಡಿಯುವ, ಭಾರತದ ಸರ್ವಾಂಗೀಣ ಅಭಿವೃದ್ಧಿಯ ಜೊತೆ ಜೊತೆಗೆ ದೇಶದ ಸಂಸ್ಕೃತಿ ಹಾಗು ಹಿರಿಮೆಯನ್ನು ಹೆಚ್ಚಿಸಿ ಉಜ್ವಲ ಭವಿಷ್ಯದೆಡೆಗೆ ಕೊಂಡೊಯ್ಯುವ ಸಮರ್ಥ ನಾಯಕತ್ವ ಹಾಗೂ ರಾಜಕೀಯ ಸಂಘಟನೆಯ ಕೊರತೆ ಎದ್ದು ತೋರುತ್ತಿತ್ತು. ಇಂತಹ ಸಂದರ್ಭದಲ್ಲಿ ರಾಷ್ಟ್ರೀಯತೆಯ ವಿಚಾರದಲ್ಲಿ ರಾಜಿ ಮಾಡಿಕೊಳ್ಳಲು ಒಪ್ಪದೇ ಕೇಂದ್ರ ಮಂತ್ರಿ ಪದವಿಯನ್ನು ತಿರಸ್ಕರಿಸಿ ಬಂದ ಡಾ|| ಶ್ಯಾಮಪ್ರಸಾದ್ ಮುಖರ್ಜಿಯವರ ಅಪ್ಪಟ ರಾಷ್ಟ್ರವಾದಿ ರಾಜಕೀಯ ಪಕ್ಷವೊಂದರ ಸ್ಥಾಪನೆಯ ಉದ್ದೇಶಕ್ಕೆ ದೀನದಯಾಳ ಉಪಾಧ್ಯಾಯರು ಜೊತೆಯಾಗಿ ನಿಂತರು. ಶ್ಯಾಮಾ ಪ್ರಸಾದ ಮುಖರ್ಜಿ 1951ರಲ್ಲಿ ಭಾರತೀಯ ಜನಸಂಘ ಎಂಬ ರಾಜಕೀಯ ಪಕ್ಷವನ್ನು ಸ್ಥಾಪಿಸಿದರು. ಆರೆಸ್ಸೆಸ್‌ನ ಅಂದಿನ ಸರಸಂಘಚಾಲಕ ಗುರೂಜಿಯವರ ಆಣತಿಯ ಮೇರೆಗೆ ದೀನದಯಾಳ್ ಉಪಾಧ್ಯಾಯ ಜನಸಂಘದ ಸಂಘಟನೆಯ ಜವಾಬ್ದಾರಿ ಹೊತ್ತರು, ಉತ್ತರಪ್ರದೇಶದ ಸಂಘಟನಾ ಕಾರ್ಯದರ್ಶಿಯಾಗಿ ತಮ್ಮ ರಾಜಕೀಯ ಜೀವನವನ್ನು ಪ್ರಾರಂಬಿಸಿದರು.

ಪಕ್ಷ ಸಂಘಟನೆಯ ಆರಂಭದ ದಿನಗಳಲ್ಲಿ ದೀನದಯಾಳರ ಸಂಘಟನಾ ಚತುರತೆ ಹಾಗು ಕಾರ್ಯತತ್ಪರತೆಗಳನ್ನು ಕಂಡ ಮುಖರ್ಜಿಯವರು "ನನಗೆ ಇಂತಹ ಇನ್ನೆರಡು ದೀನದಯಾಳರು ಸಿಕ್ಕಿಬಿಟ್ಟರೆ ಭಾರತದ ಚಿತ್ರಣವನ್ನೇ ಬದಲಾಯಿಸಿಬಿಡುತ್ತೇನೆ" ಎಂದು ಹೆಮ್ಮೆಯಿಂದ ಉದ್ಗರಿಸಿದ್ದರು. ಮುಂದೆ ದೀನದಯಾಳರು ಜನಸಂಘದ ಪ್ರಧಾನ ಕಾರ್ಯದರ್ಶಿಯಾಗಿ ನಿಯುಕ್ತಿಗೊಂಡರು. ಈಗ ಅವರ ಕಾರ್ಯಕ್ಷೇತ್ರ ಇಡೀ ದೇಶದುದ್ದಕ್ಕೂ ಹರಡತೊಡಗಿತು. ತಮ್ಮ ಪ್ರಭಾವಶಾಲಿ ವ್ಯಕ್ತಿತ್ವ, ಸರಳತೆಯಿಂದ ಎಲ್ಲರ ಮನ ಗೆಲ್ಲುತ್ತಿದ್ದ ಅವರ ವರ್ಚಸ್ಸು ದಿನದಿಂದ ದಿನಕ್ಕೆ ಬೆಳೆಯತೊಡಗಿತ್ತು. 1947ರ ಭಾರತ ಪಾಕಿಸ್ತಾನ ಯುದ್ಧದ ನಂತರ ಉಂಟಾದ ಸನ್ನಿವೇಶದಲ್ಲಿ ಕಾಶ್ಮೀರಕ್ಕೆ ಪ್ರತ್ಯೇಕ ಸ್ಥಾನಮಾನ, ಧ್ವಜ ಹಾಗೂ ಸಂವಿಧಾನ ರಚನೆಗೆ ಕೇಂದ್ರದಲ್ಲಿನ ಕಾಂಗ್ರೆಸ್ ಸರ್ಕಾರ ಅವಕಾಶ ನೀಡಿ ದ್ವಿರಾಷ್ಟ್ರವಾದಕ್ಕೆ ಪೋಷಣೆ ನೀಡಿತ್ತು, ಈ ವಿಚಾರದಲ್ಲಿ ಪ್ರಬಲ ವಿರೋಧ ವ್ಯಕ್ತಪಡಿಸಿ ಜನಸಂಘವು 1952ರಲ್ಲಿ ಚಳುವಳಿಯ ರಣಕಹಳೆ ಊದಿತು. ಚಳುವಳಿಯನ್ನು ಭಾರತಾದ್ಯಂತ ಸಮರ್ಥವಾಗಿ ನಿರ್ವಹಿಸುವ ಸಂಪೂರ್ಣ ಹೊಣೆ ದೀನದಯಾಳರ ಹೆಗಲೇರಿತ್ತು. "ಏಕ್ ದೇಶ್ ಮೆ ದೋ ಪ್ರಧಾನ್, ದೋ ನಿಶಾನ್, ದೋ ವಿಧಾನ್ ನಹೀ ಚಲೇಂಗೆ" ಎಂಬ ಘೋಷಣೆಯೊಡನೆ ಸಾವಿರಾರು ಸತ್ಯಾಗ್ರಹಿಗಳು ಹೋರಾಟಕ್ಕಿಳಿದರು. ಅವರ ವಸತಿ, ಊಟಯಾದಿಯಾಗಿ ಸಭೆ ಪ್ರದರ್ಶಗಳ ಎಲ್ಲಾ ವ್ಯವಸ್ಥೆಗಳನ್ನೂ ದೀನದಯಾಳರು ಅಚ್ಚುಕಟ್ಟಾಗಿ ನಿರ್ವಹಿಸಿದ್ದರು. ಚಳುವಳಿಯ ಸಂದರ್ಭದಲ್ಲಿ ಶ್ಯಾಮಾಪ್ರಸಾದ್ ಮುಖರ್ಜಿಯವರು ಜಮ್ಮು ಕಾಶ್ಮೀರದಲ್ಲಿ ಸೆರೆವಾಸದಲ್ಲಿರುವಾಗಲೇ ಅನುಮಾನಸ್ಪದ ರೀತಿಯಲ್ಲಿ ಅನಿರೀಕ್ಷಿತ ಮರಣವನ್ನಪ್ಪಿದರು. ಡಾ|| ಮುಖರ್ಜಿಯವರ ಮರಣದ ನಂತರ ಜನಸಂಘದ ಉಳಿವು ಕಷ್ಟ ಎಂದುಕೊಂಡವರೇ ಅನೇಕರು. ಆದರೆ ದೀನದಯಾಳರು ನಾಯಕನ ಸ್ಥಾನವನ್ನು ತುಂಬಿದ್ದಲ್ಲದೇ, ಸಮರ್ಥವಾಗಿ ಪಕ್ಷವನ್ನು ಮುನ್ನಡೆಸಿದರು. ಜನಸಂಘವನ್ನು ಪೋಷಿಸಿ ಬೆಳೆಸಲು ತಮ್ಮ ಸರ್ವಸ್ವವನ್ನೂ ಧಾರೆ ಎರೆದರು. ಗೋವಾ ವಿಮೋಚನಾ ಚಳುವಳಿಯಲ್ಲಿ ಜನಸಂಘದ ನೇತೃತ್ವವನ್ನು ಯಶಸ್ವಿಯಾಗಿ ನಿರ್ವಹಿಸಿ ಇನ್ನಷ್ಟು ಜನಪ್ರಿಯ ಹಾಗು ಸಧೃಡವಾಗುವಂತೆ ಮಾಡಿದರು. ಪ್ರಚಾರಪ್ರಿಯತೆಯತ್ತ ಗಮನ ಕೊಡದೇ ಜನಸಾಮಾನ್ಯರ ನಡುವೆ ತತ್ವ ಸಿದ್ಧಾಂತ, ಭಾರತೀಯತೆಯ ವಿಚಾರಗಳು ಹಾಗು ರಚನಾತ್ಮಕ ಕೆಲಸಗಳಿಂದ ಪಕ್ಷವನ್ನು ಸಂಘಟಿಸುವ ಕ್ರಮವನ್ನು ಭಾರತದ ರಾಜಕೀಯ ರಂಗದಲ್ಲಿ ಪ್ರಾರಂಭಿಸಿದ್ದು ದೀನದಯಾಳರ ದೊಡ್ಡ ಸಾಧನೆ ಹಾಗೂ ಹಿರಿಮೆ.

ಸಂಘಟನೆಯ ಕಾರ್ಯಕ್ಕಾಗಿ ತುಂಬಾ ಪ್ರಯಾಣ ಮಾಡುತ್ತಿದ್ದ ಅವರಿಗೆ ರೈಲು ಎರಡನೇ ಮನೆಯಾಗಿತ್ತು. ಆ ದಿನ ಫೆಬ್ರುವರಿ 10 1968, ರಾತ್ರಿ ಲಖ್ನೋದಿಂದ ಪಾಟ್ನಾಕ್ಕೆ ರೈಲಿನಲ್ಲಿ ಹೊರಟಿದ್ದರು. ಅಂದು ರೈಲಿನಲ್ಲಿ ಪ್ರಯಾಣ ಹೊರಟವರು ಅಲ್ಲೇ ತಮ್ಮ ಜೀವನದ ಪ್ರಯಾಣವನ್ನೂ ಮುಗಿಸಿಬಿಟ್ಟಿದ್ದರು. ಬೆಳಗಾಗುವ ಹೊತ್ತಿನಲ್ಲಿ ಮೊಗಲ್‌ಸರಾಯ್‌ರೈಲ್ವೇ ಸ್ಟೇಶನ ಬಳಿ ರೈಲಿನ ಬೋಗಿಯಲ್ಲಿ ಅವರ ಮೃತ ಶರೀರದೊರಕಿತ್ತು. ಯಾವುದೋ ಭಾರವಾದ ವಸ್ತುವಿನಿಂದಾದ ಆಘಾತದಿಂದ ಮರಣ ಸಂಭವಿಸಿತ್ತು. ಅಲ್ಲಿನ ಎಲ್ಲಾ ಘಟನೆಗಳೂ ನಿಘೂಡ ರೀತಿಯಲ್ಲಿ ನಡೆದು ಹೋಗಿದ್ದವು. ಅನುಮಾನಾಸ್ಪದ ಸನ್ನಿವೇಶಗಳ ನಡುವೆ ಸಂಭವಿಸಿದ ಈ ಕರಾಳ ಘಟನೆ ಮತ್ತು ಮರಣದ ಸುದ್ದಿ ಕಾಡ್ಗಿಚ್ಚಿನಂತೆ ದೇಶದೆಲ್ಲೆಡೆ ಕೆಲವೇ ಘಂಟೆಗಳೊಳಗೆ ಹರಡಿತು. ಅಭೂತಪೂರ್ವ ಸಂಘಟಕ ಹಾಗೂ ದೇಶಭಕ್ತನ ಇಹಲೋಕ ಯಾತ್ರೆ ಕೊನೆಯಾಗಿತ್ತು. ಅವರ ಮರಣಕ್ಕೆ ಇಡೀ ದೇಶವೇ ಕಂಬನಿ ಮಿಡಿಯಿತು. ಅಂದಿನ ರಾಷ್ಟ್ರಪತಿಯವರಾದ ವಿ.ವಿ. ಗಿರಿಯವರುತಮ್ಮ ಶೋಕ ಸಂದೇಶದಲ್ಲಿ "ಶ್ರೀ ದೀನದಯಾಳರು ಭಾರತದ ಶ್ರೇಷ್ಠ ಪುತ್ರರಲ್ಲಿ ಒಬ್ಬರು ಅವರು ಪ್ರಖರ ರಾಷ್ಟ್ರವಾದಿ ಹಾಗೂ ಅತುಲನೀಯ ನಿಷ್ಠಾವಂತ ಕಾರ್ಯಕರ್ತರಾಗಿದ್ದರು" ಎಂದು ವರ್ಣಿಸಿದ್ದರು.

ತ್ಯಾಗಮಯ ಹಾಗೂ ಕರ್ತವ್ಯತತ್ಪರ ಜೀವನ ನಡೆಸಿ ಭಾರತ ಮಾತಗೆ ತನ್ನ ಸರ್ವಸ್ವವನ್ನೂ ಅರ್ಪಿಸಿದ ಪಂಡಿತ ದೀನದಯಾಳ ಉಪಾಧ್ಯಾಯರ ಜೀವನ ಸಾವಿರಾರು ದೇಶಭಕ್ತರಿಗೆ ಇಂದಿಗೂ ಪ್ರೇರಣೆಯ ನಂದಾದೀಪವಾಗಿದೆ. ಅವರು ಪ್ರತಿಪಾದಿಸಿದ ಅಂತ್ಯೋದಯ ಕಲ್ಪನೆ ಭಾರತದಂತಹ ದೇಶದಲ್ಲಿ ಬಡವ ದೀನದಲಿತರ ಏಳಿಗೆಗಾಗಿ ಸರ್ಕಾರ ಹಾಗೂ ಸಮಾಜಕ್ಕೆ ಮಾರ್ಗದರ್ಶಿಯಾಗಿದೆ. ಹಾಗೆಯೇ ಅವರ ತತ್ವಚಿಂತನೆಯಲ್ಲಿ ಹೊರಬಂದ ಏಕಾತ್ಮ ಮಾನವತೆಯ ಕಲ್ಪನೆ ಪೃಥ್ವಿಯ ಸಮಸ್ತ ಮಾನವ ಜನಾಂಗ ಅರ್ಥಪೂರ್ಣ ಬಾಳ್ವೆ ನಡೆಸಲು ಪ್ರೇರಣೆ ನೀಡಬಲ್ಲ ದರ್ಶನವಾಗಿದೆ.

ದೇಶವನ್ನು ಸ್ವಚ್ಛವಾಗಿಸುವ ಸಲುವಾಗಿ 12 ವರ್ಷದ ಬಾಲಕರ ತಂಡವೊಂದು ನಿತ್ಯ ಶ್ರಮ ಪಡುತ್ತಿದೆ. ಮಕ್ಕಳನ್ನು ಸೈನ್ಸ್, ಟೆಕ್ನಾಲಜಿ ಇಂಜಿನಿಯರಿಂಗ್, ಗಣಿತ ಕ್ಷೇತ್ರದತ್ತ ಆಕರ್ಷಿಸುವ ಸಲುವಾಗಿ 10 ಮಂದಿ ಬಾಲಕರಿಂದ 2015ರಲ್ಲಿ ಹೈದರಾಬಾದ್‌ನಲ್ಲಿ ಪ್ರಾರಂಭಗೊಂಡ ರೋಬೋಟ್ರೋಬಿಕ್ಸ್ ಕ್ಲಬ್ ಇದೀಗ 'ಥಿಂಕ್ ಆಂಡ್ ಥ್ರೋ' ಎಂಬ ಅಭಿಯಾನದ ಮೂಲಕ ಒಣ ತ್ಯಾಜ್ಯ ನಿರ್ವಹಣೆಯನ್ನು ಯಶಸ್ವಿಯಾಗಿ ಮಾಡುತ್ತಿದೆ. 2016ರಲ್ಲಿ ಅಮೆರಿಕದಲ್ಲಿ ನಡೆಯುವ ಟ್ರ್ಯಾಶ್ ಸ್ಪರ್ಧೆಗೆ ಭಾಗವಹಿಸುವ ಸಲುವಾಗಿ ರಿಸೈಕ್ಲಿಂಗ್ ಕುರಿತು ಸಂಶೋಧನೆ ನಡೆಸ ತೊಡಗಿದಾಗ ಹೈದರಾಬಾದ್‌ನ ಒಣತ್ಯಾಜ್ಯದ ಪ್ರಮಾಣ–ಪರಿಣಾಮ ಅನುಭವಕ್ಕೆ ಬಂತು. ಈ ಸಮಸ್ಯೆಗೆ ಪರಿಹಾರವಾಗಿ ತಾವೇ ಒಣತ್ಯಾಜ್ಯಗಳನ್ನು ಸಂಗ್ರಹಿಸಿ ರಿಸೈಕ್ಲಿಂಗ್‌ಗೆ ನೀಡುವುದು, ಜಾಗೃತಿಗಾಗಿ ಪದ್ಯ ಸ್ಕಿಟ್ ರಚಿಸುವುದು ಮುಂತಾದ ಚಟುವಟಿಕೆಯ ಮೂಲಕ ಹೈದರಾಬಾದ್‌ನ ಜನರಲ್ಲಿ ಒಣ ಮತ್ತು ಹಸಿ ಕಸಗಳನ್ನು ವಿಂಗಡಿಸುವಂತೆ ಜಾಗೃತಿ ಮೂಡಿಸಿದರು. ರಿಸೈಕ್ಲಂಗ್ ಕಂಪೆನಿ 'ಲೈಟ್ಸ್ ರಿಸೈಕ್ಲಿಂಗ್‌ನ ಸಹಕಾರದೊಂದಿಗೆ ತ್ಯಾಜ್ಯಗಳನ್ನು ಸಂಗ್ರಹಿಸಿ ರಿಸೈಕ್ಷಿಂಗ್ ಮಾಡಲು ನಿಶ್ಚಯಿಸಿದರು. ಇದೀಗ 800 ಮಕ್ಕಳು ಈ 'ಥಿಂಕ್ ಆಂಡ್ ಥ್ರೋ' ಎಂಬ ಅಭಿಯಾನದಲ್ಲಿ ಭಾಗವಹಿಸಿದ್ದು, 20 ದಿನಗಳಲ್ಲೇ 1 ಟನ್ ತ್ಯಾಜ್ಯವನ್ನು ಸಂಗ್ರಹಿಸಿ, 20,000 ರೂ. ಗಳನ್ನು ಸಂಪಾದಿಸಿದ್ದಾರೆ.



**ಹೆಸರು :** ಗಂಗಾತೀರಿ

**ಮೂಲ :** ಪೂರ್ವ ಉತ್ತರ ಪ್ರದೇಶ ಮತ್ತು ಪಶ್ಚಿಮ ಬಿಹಾರದ ಗಂಗಾ ನದಿಯ ತಟದ ಹಳ್ಳಿಗಳಲ್ಲಿ ಕಾಣಸಿಗುತ್ತವೆ.

**ರೂಪ :** ಮಧ್ಯಮ ಗಾತ್ರದ್ದಾಗಿದ್ದು ಸಾಮಾನ್ಯವಾಗಿ ಬಿಳಿಯ ಬಣ್ಣ ಹೊಂದಿರುತ್ತವೆ. ಕಾಲುಗಳ ತುದಿ, ಕಣ್ಣಿನ ಸುತ್ತ ಕಪ್ಪು ಬಣ್ಣ. ಕೋಡುಗಳು ಮಧ್ಯಮ ಗಾತ್ರದ್ದು. ನೋಡಲು ಸುಂದರ ಹಾಗೂ ಗಂಭೀರವಾಗಿ ಕಾಣುತ್ತವೆ.

**ವಿಶೇಷತೆ :** ಹಸುಗಳು ಮಧ್ಯಮ ಪ್ರಮಾಣದ ಹಾಲನ್ನು ಕೊಡುತ್ತವೆ. ಹೋರಿಗಳು ಕಠಿಣ ಕೆಲಸಕ್ಕೆ ಹೇಳಿ ಮಾಡಿಸಿದ್ದಾಗಿವೆ.

**ಹಾಲಿನ ಪ್ರಮಾಣ:** ಒಂದು ಕರಾವಿನಲ್ಲಿ 900ರಿಂದ 1200ಲೀಟರ್.

## ಭಿಕಾಜಿ ಕಾಮಾ (ಮೇಡಂ ಕಾಮಾ)

**24 ಸಪ್ಟಂಬರ್ 1861 – 13 ಆಗಸ್ಟ್ 1936**



ಭಾರತ ಸ್ವಾತಂತ್ರ್ಯದ ಚಳುವಳಿಯ ಧೀಮಂತ ಮಹಿಳಾ ಹೋರಾಟಗಾರರಲ್ಲಿ ಭಿಕಾಜಿ ರುಸ್ತುಂ ಕಾಮಾ ಅವರ ಹೆಸರು ಅಗ್ರಪಂಕ್ತಿಯಲ್ಲಿದೆ. ಅವರು 1861ರ ವರ್ಷದ ಸೆಪ್ಟೆಂಬರ್ 24ರಂದು ಮುಂಬೈನ ಶ್ರೀಮಂತ ಪಾರ್ಸಿ ಕುಟುಂಬವೊಂದರಲ್ಲಿ ಜನಿಸಿದರು. ಆಕೆಯ ತಂದೆ ಸೊರಾಬ್ಜಿ ಫ್ರೇಂಜಿ ಪಟೇಲ್ ಮುಂಬೈನ ಪ್ರಸಿದ್ಧ ವರ್ತಕರು ಮತ್ತು ವಕೀಲರೂ ಆಗಿದ್ದರು. ಮುಂಬೈನ ಅಲೆಕ್ಸಾಂಡ್ರಾ ಪಾರ್ಸೀ ಹೆಣ್ಣು ಮಕ್ಕಳ ಶಾಲೆಯಲ್ಲಿ ಓದಿದ ಆಕೆ ಆ ಕಾಲದ ಪ್ರಸಿದ್ಧ ಸಾಲಿಸಿಟರ್ ಆಗಿದ್ದ ಕೆ. ಆರ್. ಕಾಮಾ ಅವರನ್ನು ವಿವಾಹವಾದರು.

1897ರಲ್ಲಿ ಮುಂಬೈ ಪ್ರಾಂತ್ಯದಾದ್ಯಂತ ಪ್ಲೇಗ್ ರೋಗ ಉಲ್ಬಣಿಸಿದಾಗ ಮೇಡಮ್ ಕಾಮಾ ಸಾರ್ವಜನಿಕ ಸೇವೆಗೆ ಮುಂದಾದರು. ತಮ್ಮ ಜೀವದ ಹಂಗನ್ನೂ ತೊರೆದು ರೋಗಿಗಳ ಶುಶ್ರೂಷೆ ಮಾಡಿದ ಅವರು ಸಾಮಾನ್ಯ ಜನರ ಪಾಲಿಗೆ ದೇವತೆಯೇ ಆಗಿಹೋದರು. ದೇಶ ಶೀಘ್ರ ಸ್ವಾತಂತ್ರ್ಯವನ್ನು ಗಳಿಸುವಂತಾಗಲು ಬಾಲ ಗಂಗಾಧರ ತಿಲಕರ ನಾಯಕತ್ವದಲ್ಲಿ ಮುನ್ನಡೆಯುವಂತೆ ಸಾಮಾನ್ಯರನ್ನು ಪ್ರೇರೇಪಿಸಿದರು. ಪ್ಲೇಗ್ ರೋಗಿಗಳ ಶುಶ್ರೂಷೆ ಮಾಡುತ್ತ ಸ್ವತ: ತಾವೇ ಅನಾರೋಗ್ಯಕ್ಕೆ ತುತ್ತಾದಾಗ ಅವರ ಕುಟುಂಬದವರ ಮತ್ತು ಶುಭಚಿಂತಕರ ಒತ್ತಾಯದಿಂದಾಗಿ ಆರೋಗ್ಯ ಸುಧಾರಣೆಗೆ ಇಂಗ್ಲೆಂಡಿಗೆ ತೆರಳಿದರು.

ರೋಗದಿಂದ ಗುಣಮುಖ ಹೊಂದಿದ ಭಿಕಾಜಿ ಕಾಮಾ ವಿದೇಶಿ ನೆಲದಿಂದಲೇ ರಾಷ್ಟ್ರ ಜಾಗೃತಿಯ ಕಾರ್ಯಗಳನ್ನು ಆರಂಭಿಸಿದರು . ಪರದೇಶದಲ್ಲೇ ಇತರ ದೇಶಭಕ್ತರೊಡಗೂಡಿ ಭಾರತದ ಧ್ವಜವನ್ನು ರೂಪಿಸಿದ ಮೇಡಂ ಕಾಮಾ ಜರ್ಮನಿಯ ಸ್ಟುಟ್ಗಾರ್ಟ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಸಮಾಜವಾದಿ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಬ್ರಿಟೀಷ್ ರಾಜ್ಯದಡಿ ಭಾರತೀಯರ ಕಷ್ಟ ಕಾರ್ಪಣ್ಯ ಹಾಗೂ ಬ್ರಿಟಿಷರ ದೌರ್ಜನ್ಯಗಳ ಕುರಿತು ಪ್ರಖರ ವಾದ ಮಂಡಿಸಿದರು.

ಅಲ್ಲೇ ಭಾರತ ಧ್ವಜವನ್ನು ಹಾರಿಸಿ "ಇದು ಸ್ವತಂತ್ರ ಭಾರತದ ಧ್ವಜ, ಇದರ ಜನನ ಇಂದಾಗಿದೆ. ಇದು ಭಾರತದ ಸ್ವತಂತ್ರಕ್ಕಾಗಿ ಜೀವತ್ಯಜಿಸಿದ ಯುವಜನತೆಯ ನೆತ್ತರಿನಿಂದ ಪವಿತ್ರಗೊಳಿಸಲ್ಪಟ್ಟಿದೆ. ಓ ಮಹನೀಯರೇ ಏಳಿ, ಈ ಧ್ವಜಕ್ಕೊಂದಿಸಿ. ಈ ಧ್ವಜದ ಪ್ರತಿನಿಧಿಯಾಗಿ ಪ್ರಾರ್ಥಿಸುತ್ತೇನೆ, ಓ ವಿಶ್ವದೆಲ್ಲೆಡೆಯ ಸ್ವಾತಂತ್ರ್ಯಾರಾಧಕರೇ ಈ ಧ್ವಜದೊಡನೆ ಸಹಕರಿಸಿ", ಹೀಗೆಂದು ಅಧಿವೇಶನದಲ್ಲಿ ಪ್ರಪ್ರಥಮ ಬಾರಿಗೆ ಭಾರತದ ಧ್ವಜಾರೋಹಣ ಮಾಡಿದವರು, ಮೇಡಂ ಕಾಮಾ. ಅಂದು ವಶೀಕರಿಸಲ್ಪಟ್ಟವರಂತೆ ಅತಿಥಿಗಳೆಲ್ಲಾ ಎದ್ದುನಿಂತು ಧ್ವಜಕ್ಕೆ ನಮಿಸಿದ್ದರು.

ಜರ್ಮನಿಯ ಸಮ್ಮೇಳನದ ನಂತರ ಮೇಡಂ ಕಾಮಾ ಅಮೆರಿಕೆಯ ನ್ಯೂಯಾರ್ಕ್‌ನಲ್ಲಿ ಪತ್ರಕರ್ತರನ್ನುದ್ದೇಶಿಸಿ ಬ್ರಿಟಿಷರ ದಬ್ಬಾಳಿಕೆಯನ್ನು ಖಂಡಿಸಿ ಮಾತನಾಡಿದರು. 1908ರಲ್ಲಿ ಲಂಡನ್ ಗೆ ಹಿಂತಿರುಗಿ 'ಭಾರತಭವನ'ದಲ್ಲಿ ಒಂದು ಸಭೆಯನ್ನುದ್ದೇಶಿಸಿ ಮಾತನಾಡಿ ದೇಶದ ಯುವಕರಿಗೆ ಸಂದೇಶ ನೀಡುತ್ತಾ 'ಬ್ರಿಟಿಷರು ಎಷ್ಟೇ ದೊಡ್ಡ ಹುದ್ದೆ ಕೊಟ್ಟರೂ ಅದನ್ನು ನಿರಾಕರಿಸಿ. ಅವರನ್ನು ಓಲೈಸಬೇಕಾಗಿಲ್ಲ. ಭಾರತ ನಮ್ಮದು. ಸ್ವತಂತ್ರ ಜೀವನವನ್ನು ರೂಢಿಸಿಕೊಳ್ಳಿ' ಎಂದು ಕರೆ ಇತ್ತರು.

ವಿದೇಶಿ ನೆಲದಲ್ಲಿ ಅಪೂರ್ವ ರೀತಿಯಲ್ಲಿ ಕ್ರಾಂತಿಕಾರಕ ಚಟುವಟಿಕೆ ನಡೆಸಿದ ಮದನ್ ಲಾಲ್ ಧಿಂಗ್ರರಂತಹ ಯುವಕರು ಮೇಡಮ್ ಕಾಮಾ ಅವರಿಂದ ಅಪಾರವಾಗಿ ಸ್ಫೂರ್ತಿ ಪಡೆದಿದ್ದರು. 1914ರಲ್ಲಿ ಪ್ರಥಮ ಮಹಾ ವಿಶ್ವಯುದ್ಧ ಪಾರಂಭಗೊಂಡಾಗ ಮೇಡಮ್ ಕಾಮಾ ಭಾರತದ ಪರವಾಗಿ ಬ್ರಿಟಿಷರ ವಿರುದ್ಧ ವಿದೇಶಿ ಸೈನ್ಯಗಳ ಸಹಕಾರ ಪಡೆಯಲು ಸಾಕಷ್ಟು ಪ್ರಯತ್ನ ನಡೆಸಿದ್ದರು. 'ವಂದೇ ಮಾತರಂ' ಮತ್ತು 'ಮದನ್ಸ್ ತಲ್ವಾರ್' (ಮದನ್ ಲಾಲ್ ಧಿಂಗ್ರ ಸ್ಮರಣಾರ್ಥ ಪತ್ರಿಕೆ) ಎಂಬ ಎರಡು ಪತ್ರಿಕೆಗಳನ್ನು ಪ್ರಾರಂಭಿಸಿದರು.

1931ರಲ್ಲಿ ತಮ್ಮ ಎಪ್ಪತ್ತನೆಯ ವಯಸ್ಸಿನಲ್ಲಿ ಭಾರತಕ್ಕೆ ಹಿಂದಿರುಗಿದರು. "ದೇಶ ನಿರ್ಮಾಣ ಕಾರ್ಯದಲ್ಲಿ ಮಹಿಳೆಯ ಪಾತ್ರವನ್ನು ಮರೆಯದಿರಿ" ಎಂದು ಹೇಳುತ್ತಿದ್ದ ಮೇಡಮ್ ಕಾಮಾ. ಆಗಸ್ಟ್ 13, 1936ರಂದು ನಿಧನರಾದರು.

**ಸಂಪಾದಕೀಯ ಸಹಕಾರ** ನರೇಂದ್ರ ಕುಮಾರ್, ಶೈಲೇಶ್ ಕುಲಕರ್ಣಿ, ಪ್ರವೀಣ್ ಪಟವರ್ಧನ್, ಪ್ರತಾಪ್ ಕೊಡಂಚ, ಶ್ರೀನಿವಾಸ್ ಹೆಗಡೆ, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್, ಸತ್ಯಾನಾರಾಯಣ ಶಾನಭಾಗ್

## ಆರೆಸ್ಸೆಸ್ ಕಾರ್ಯಕರ್ತರ ಕೊಲೆ: ಕಣ್ಣೂರು ಜಿಲ್ಲಾ ಸಿಪಿಎಂ ಕಾರ್ಯದರ್ಶಿ ಮೇಲೆ ಸಿಬಿಐ ಆರೋಪ ಪಟ್ಟಿ



ಕೇರಳ ಸಿಪಿಎಂನಲ್ಲೇ ಪ್ರಭಾವಿ ನಾಯಕ ಎಂದು ಪರಿಗಣಿಸಲ್ಪಡುವ ಕಣ್ಣೂರು ಜಿಲ್ಲಾ ಕಾರ್ಯದರ್ಶಿ ಪಿ. ಜಯರಾಮನ್ ಮೇಲೆ 2014ರ ಆರೆಸ್ಸೆಸ್ ಕಾರ್ಯಕರ್ತ ಮನೋಜ್ ಕೊಲೆ ಪ್ರಕರಣದಲ್ಲಿ ಸಿಬಿಐ ಚಾರ್ಜ್‌ಶೀಟ್ ಹಾಕಿದೆ. ಸಿಪಿಎಂನಿಂದ ಹಲವರು ಆರೆಸ್ಸೆಸ್ ಬಿಜೆಪಿ ಕಡೆಗೆ ಹೋಗುತ್ತಿರುವುದನ್ನು ತಡೆದು ತನ್ನ ಕಾರ್ಯಕರ್ತರ ನೈತಿಕ ಸ್ಥೈರ್ಯ ಹೆಚ್ಚಿಸಲು ಜಯರಾಮನ್ ಈ ಸಂಚು ರೂಪಿಸಿದ್ದರು ಎಂದು ಸಿಬಿಐ ಹೇಳಿದೆ.

ಇನ್ನೊಂದು ಮಹತ್ವದ ಬೆಳವಣಿಗೆಯಲ್ಲಿ, ಕೇರಳದಲ್ಲಿ ಇತ್ತೀಚೆಗೆ ನಡೆದ ರಾಜೇಶ್ ಎಂಬ ಆರೆಸ್ಸೆಸ್ ಕಾರ್ಯಕರ್ತರ ಕೊಲೆಯ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಆಗ್ರಹಿಸಿ ಮತ್ತು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಂತೆ ಆಗ್ರಹಿಸಿ ದೆಹಲಿಯ ವಿನಯ್ ಜೋಷಿ ಎಂಬವರು ಕೇರಳ ಸರ್ಕಾರದ ಮುಖ್ಯ ಕಾರ್ಯದರ್ಶಿ, ಪೊಲೀಸ್ ಡಿಜಿಪಿ ಮತ್ತು ಎಸ್‌ಪಿಯವರಿಗೆ ವಕೀಲರ ಮೂಲಕ ನೋಟೀಸ್ ನೀಡಿದ್ದಾರೆ. ಹಾಗೆಯೇ, ಸಂಘದ ಹಲವಾರು ಕಾರ್ಯಕರ್ತರ ಕೊಲೆ ಪ್ರಕರಣಗಳ ತನಿಖೆಯನ್ನು ಚುರುಕುಗೊಳಿಸುವಂತೆಯೂ ಇದರಲ್ಲಿ ಆಗ್ರಹಿಸಲಾಗಿದೆ. ಮುಖ್ಯಮಂತ್ರಿ ಪಿನರಾಯಿ ವಿಜಯನ್ ಅವರ ಮೇಲಿನ ಕೊಲೆ ಆಪಾದನೆಯ ತನಿಖೆಯನ್ನು ಸಿಬಿಐಗೆ ವಹಿಸುವಂತೆಯೂ ಇದರಲ್ಲಿ ಆಗ್ರಹಿಸಲಾಗಿದೆ.

ಕೇವಲ ಪ್ರತಿಭಟನೆಗಳ ಮೂಲಕ ನಡೆಯುತ್ತಿದ್ದ ಹೋರಾಟ ಈಗ ಕಾನೂನು ಸ್ವರೂಪ ಪಡೆದುಕೊಂಡಿರುವುದು, ಸಿಬಿಐ ತನಿಖೆ ಚುರುಕಾಗಿರುವುದು ಈಗ ಕಮ್ಯುನಿಷ್ಟರಿಗೆ ನುಂಗಲಾರದ ತುತ್ತಾಗಿದೆ.

# ಸಾಲುದ್ದದ ಸುದ್ದಿಗಳು

## ಸಮರಸವೇ ಜೀವನ!

ನಕಾರಾತ್ಮಕ ಚಿಂತನೆಗಳನ್ನು ಮೈಗೂಡಿಸಿಕೊಳ್ಳದೇ ಸಕಾರಾತ್ಮಕವಾಗಿ ಯೋಚಿಸುತ್ತ ಪರಿಶ್ರಮ ಹಾಕಿ ದುಡಿದರೆ ಅದುವೇ ಸಮರಸದ ಜೀವನ. ಹಾಗೇ ಶ್ರಮದಿಂದ ದುಡಿದು ಯಶಸ್ಸು ಪಡೆದವರು ಇವರು.



ಮನೆಗೆ ಪರಿಸರಸ್ನೇಹಿ ಸೋಫಾ ಖರೀದಿಸಲು ಮುಂದಾದ ಆ ದಂಪತಿಯ ಜೀವನದ ದಿಕ್ಕು ಒಂದು ಬಿದಿರು ಕಡ್ಡಿಯಿಂದ ಬದಲಾಯಿತು. ಹಾಗಾಗಿ ಅವರನ್ನು ಬಿದಿರು ಅಥವಾ ಬೊಂಬು ದಂಪತಿ ಎಂದೇ ಕರೆಯಲಾಗುತ್ತದೆ. ಅವರೇ ಪ್ರಶಾಂತ್ ಲಿಂಗಂ ಮತ್ತು ಅರುಣಾ ಕಪ್ಪಗಂಟ್ಲು. ಇಂದು ಬಿದಿರು ಹಾಗೂ ಬೊಂಬುಗಳ ಮೂಲಕ ನಗರ ಪ್ರದೇಶಗಳಲ್ಲಿ ಮನೆ ನಿರ್ಮಾಣ ಮಾಡುವ ಕೆಲಸದಲ್ಲಿ ನಿರತರಾಗಿದ್ದಾರೆ.

ಪ್ರಶಾಂತ್ ಹಾಗೂ ಅರುಣಾ ಹೈದರಾಬಾದ್ ನಿವಾಸಿಗಳು. ವೃತ್ತಿಯಲ್ಲಿ ಎಂಜಿನಿಯರ್ ಆಗಿರುವ ಈ ದಂಪತಿ ಒಳಾಂಗಣ ವಿನ್ಯಾಸ ಮಾಡುತ್ತಿದ್ದರು. 2006ರಲ್ಲಿ ಇವರು ಮನೆಗೆ ಪರಿಸರಸ್ನೇಹಿ ಸೋಫಾ ತರಲು ಮುಂದಾಗುತ್ತಾರೆ. ಆದರೆ ಇಡೀ ಹೈದರಾಬಾದ್ ನಗರವನ್ನು ತಲಾಶ್ ಮಾಡಿದರೂ ಇವರ ಇಚ್ಛೆಯ ಪರಿಸರಸ್ನೇಹಿ ಸೋಫಾ ದೊರೆಯಲಿಲ್ಲ.

ಅಂತಿಮವಾಗಿ ಪ್ರಶಾಂತ್ ಬಾಂಗ್ಲಾದೇಶದ ಗಡಿಗೆ ಹೋಗಿ ಬಿದಿರಿನ ಸೋಫಾ ತರುತ್ತಾರೆ. ಬಾಂಗ್ಲಾದ ಗಡಿಯಲ್ಲಿ ಬೊಂಬು ಮನೆಗಳನ್ನು ನೋಡಿದ ಪ್ರಶಾಂತ್‌ಗೆ ನಾವು ಯಾಕೆ ನಗರ ಪ್ರದೇಶಗಳಲ್ಲಿ ಇಂತಹ ಮನೆಗಳನ್ನು ನಿರ್ಮಿಸಬಾರದೆಂಬ ಯೋಚನೆ ಹೊಳೆಯುತ್ತದೆ. ಈ ಆಲೋಚನೆಯನ್ನು ಪತ್ನಿ ಅರುಣಾ ಬಳಿ ಹಂಚಿಕೊಳ್ಳುತ್ತಾರೆ. ಒಳಾಂಗಣ ವಿನ್ಯಾಸದ ಕೆಲಸಕ್ಕೆ ತಿಲಾಂಜಲಿ ಇಟ್ಟು, ಕೇವಲ 4 ಲಕ್ಷ ರೂಪಾಯಿ ಬಂಡವಾಳದಲ್ಲಿ ಬಿದಿರು ಮನೆ ನಿರ್ಮಾಣ ಮಾಡುವ ಕಂಪೆನಿ ಆರಂಭಿಸುತ್ತಾರೆ.

ಮೂರು ವರ್ಷ ಕಳೆದರೂ ಒಂದೇ ಒಂದು ಮನೆ ನಿರ್ಮಾಣದ ಆರ್ಡರ್ ಬರುವುದಿಲ್ಲ! ಇದರಿಂದ ಎದೆಗುಂದದೆ ಇವರು ಸಾಮಾಜಿಕ ಜಾಲತಾಣಗಳ ಮೂಲಕ ಪ್ರಚಾರ ನೀಡಿ ಕಂಪೆನಿಗೆ ಮರುಜನ್ಮ ನೀಡುತ್ತಾರೆ. ಈ ಪ್ರಚಾರದ ಪರಿಣಾಮ ಮನೆ ನಿರ್ಮಾಣದ ಆರ್ಡರ್‌ಗಳು ಬರತೊಡಗಿದವು.

ದೊಡ್ಡ ದೊಡ್ಡ ಕಾರ್ಪೊರೇಟ್ ಕಂಪೆನಿಗಳಿಗೆ ವಿಶ್ರಾಂತಿ ಗೃಹಗಳು, ಗ್ರಂಥಾಲಯಗಳು, ಜಿಮ್, ಸಂಗೀತ ಕೊಠಡಿಗಳನ್ನು ನಿರ್ಮಾಣ ಮಾಡಿಕೊಟ್ಟಿದ್ದಾರೆ. 12 ಲಕ್ಷ ರೂಪಾಯಿಯಿಂದ ಹಿಡಿದು 60 ಲಕ್ಷ ರೂಪಾಯಿವರೆಗಿನ ಮನೆಗಳನ್ನು ನಿರ್ಮಾಣ ಮಾಡಲಾಗುತ್ತದೆ. ಇಲ್ಲಿಯವರೆಗೂ 150 ಮನೆಗಳನ್ನು ನಿರ್ಮಾಣ ಮಾಡಿದ್ದು, ವಾರ್ಷಿಕ ಒಂದು ಕೋಟಿ ರೂಪಾಯಿಗೂ ಹೆಚ್ಚು ವರಮಾನ ಪಡೆದಿರುವುದಾಗಿ ಅರುಣಾ ಹೇಳುತ್ತಾರೆ. ತಾಳ್ಮೆ ಇದ್ದರೆ ಜೀವನದಲ್ಲಿ ಏನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ನಾವೇ ಉದಾಹರಣೆ ಎನ್ನುತ್ತಾರೆ ಪ್ರಶಾಂತ್.

## ಕೊಳಕು ನಗರದಿಂದ ನಂ. 1 ಸ್ವಚ್ಛ ನಗರವಾಗಿ ಬದಲಾದ ಇಂದೋರ್



ದೇಶದ ಅನೇಕ ನಗರಗಳಂತೆ ಒಂದಾಗಿದ್ದ ಇಂದೋರ್ ಈಗ ತನ್ನ ಸ್ವಚ್ಛತೆಯಿಂದ ಇತರ ನಗರಗಳಿಗಿಂತ ಭಿನ್ನವಾಗಿದೆ. ಇಡೀ ನಗರದಲ್ಲಿ ಎಲ್ಲೇ ನೋಡಿದರೂ ಸ್ವಲ್ಪವೂ ಕಸ ಕಾಣಸಿಗದು. ಅಲ್ಲಿನ ಮಹಾನಗರ ಪಾಲಿಕೆಯ ಕಮಿಷನರ್ ಮನೀಷ್ ಸಿಂಗ್ ಮತ್ತು ಮೇಯರ್ ಮಾಲಿನಿ ಲಕ್ಷ್ಮಣ ಸಿಂಗ್ ಗೌರ್ ಅವರ ಶ್ರಮದಿಂದ ಇದು ಸಾಧ್ಯವಾಗಿದೆ.

ಮೇ 2015ರಲ್ಲಿ ಮನೀಷ್ ಅವರು ಅಧಿಕಾರ ವಹಿಸಿಕೊಂಡಾಗ ನಗರದಲ್ಲಿ 1800 ರಷ್ಟು ಕಸ ಸುರಿಯುವ ಜಾಗಗಳಿದ್ದವು. ಅವುಗಳ ಹತ್ತಿರ ಹೋಗಲು ಆಗದಷ್ಟು ವಾಸನೆ ಬರುತ್ತಿತ್ತು. ಸೊಳ್ಳೆ ನೊಣಗಳ ಕಾಟ ಹೇಳತೀರದು. ಸಾರ್ವಜನಿಕ ಶೌಚಾಲಯಗಳ ಸ್ಥಿತಿಯಂತೂ ದೇವರಿಗೇ ಪ್ರೀತಿ ಎಂಬಂತಿತ್ತು. ಈಗ ಆ ಎಲ್ಲ 1800 ಸ್ಥಳಗಳಲ್ಲಿ ಕಸ ಹಾಕುವುದು ನಿಂತಿದೆ. ನಗರದಲ್ಲಿ ಎಲ್ಲೂ ಕಸದ ತೊಟ್ಟಿಗಳಿಲ್ಲ. ಎಲ್ಲರ ಮನೆಗೇ ಹೋಗಿ ಕಸ ಸಂಗ್ರಹ ಮಾಡುವ ಕಾರ್ಯ ನಡೆಯುತ್ತಿದೆ. 175 ರಷ್ಟು ಸಾರ್ವಜನಿಕ ಶೌಚಾಲಯಗಳು ಸುಸ್ಥಿತಿಯಲ್ಲಿವೆ. ಇನ್ನೂ 50 ಶೌಚಾಲಯ ನಿರ್ಮಾಣ ಕಾರ್ಯ ನಡೆಯುತ್ತಿದೆ.

ಬೀದಿಯಲ್ಲಿ ಕಸ ಸುರಿಯುವವರಿಗೆ ದಂಡ ವಿಧಿಸುವುದೂ ಸೇರಿದಂತೆ ಎಲ್ಲದರ ಮೇಲ್ವಿಚಾರಣೆಗಾಗಿ ಬೆಳಗ್ಗೆ 6ರಿಂದ 9ರವರೆಗೆ ಮನೀಷ್ ಅವರ ಜೀಪಿನಲ್ಲಿ ನಗರವಿಡೀ ಸುತ್ತಾಡುತ್ತಾರೆ. ದನ, ಹಂದಿ ಸಾಕಿ ಎಲ್ಲೆಂದರಲ್ಲಿ ಬಿಡುವವರಿಗೂ ದಂಡ ವಿಧಿಸಿ ಎಲ್ಲರನ್ನೂ ಸರಿದಾರಿಗೆ ತಂದಿದ್ದರ ಪರಿಣಾಮ, ಈಗ ನಗರದಲ್ಲಿ ಬೀದಿ ದನಗಳೂ, ನಾಯಿಗಳೂ ಇಲ್ಲ. ಅವರ ಜೀಪು ಬಂತೆಂದರೆ, ನಿಯಮ ಪಾಲಿಸದವರಿಗೆ ದಂಡ ಬಿದ್ದಂತೆಯೇ ಎನ್ನುವಷ್ಟರ ಮಟ್ಟಿಗೆ ಖಡಕ್ ಅಧಿಕಾರಿ ಎಂಬ ಹೆಸರು ಮನೀಷ್ ಸಿಂಗ್ ಅವರಿಗಿದೆ.

ಅಲ್ಲದೇ ಸುಮಾರು 6 ಸ್ವಯಂಸೇವಾ ಸಂಸ್ಥೆಗಳ 400 ಸ್ವಯಂಸೇವಕರ ಸಹಾಯದೊಂದಿಗೆ ಕಸ ವಿಂಗಡಣೆಯ ಬಗ್ಗೆ ಜನರಲ್ಲಿ ಜಾಗೃತಿ ಮತ್ತು ತರಬೇತಿ ನಡೆಯುತ್ತಿದೆ. ಟಿವಿ, ರೇಡಿಯೋಗಳಲ್ಲಿ ಈ ಬಗ್ಗೆ ಜಾಗೃತಿ ಕಾರ್ಯಕ್ರಮಗಳು ಬರುತ್ತಿವೆ. ಸಂಗ್ರಹವಾದ ಎಲ್ಲ ಕಸವನ್ನು ವಿಂಗಡಿಸಿ, ಹಸಿ ಕಸದಿಂದ ಗೊಬ್ಬರ ತಯಾರಿ ನಡೆದರೆ, ಪ್ಲಾಸ್ಟಿಕ್ ಪೇಪರ್ ಮೊದಲಾದ ಒಣಕಸವನ್ನು ಪುನರ್ಬಳಕೆ ಮಾಡಲಾಗುತ್ತಿದೆ. ಇದೆಲ್ಲದರ ಪರಿಣಾಮವಾಗಿ ಸ್ವಚ್ಛ ನಗರಗಳ ಪೈಕಿ 2015ರಲ್ಲಿ 86ನೇ ಸ್ಥಾನದಲ್ಲಿದ್ದ ಇಂದೋರ್ ಈ ವರ್ಷ ಮೊದಲನೇ ಸ್ಥಾನ ಗಳಿಸಿದೆ!

ಈಗ ಜನರಲ್ಲೂ ಜಾಗೃತಿ ಹೆಚ್ಚುತ್ತಿದೆ. ಯಾರಾದರೂ ರಸ್ತೆಬದಿಯಲ್ಲಿ ಕಸ ಬಿಸಾಡಿದರೆ, ಜನ ಅವರನ್ನು ಅಸ್ಪೃಶ್ಯರಂತೆ ನೋಡಲು ಪ್ರಾರಂಭಿಸಿದ್ದಾರೆ. ಕೆಲವೊಮ್ಮೆ ಈ ವಿಷಯಕ್ಕಾಗಿ ಜನರ ನಡುವೆ ಜಗಳವಾಗಿದ್ದೂ ಇದೆಯಂತೆ.


ಛಲ ಬಿಡದೇ ಪ್ರಯತ್ನ ಮಾಡಿದರೆ, ಯಾವುದೂ ಅಸಾಧ್ಯವಲ್ಲ ಎಂಬುದನ್ನು ಐಎಎಸ್ ಅಧಿಕಾರಿ ಮನೀಷ್ ಸಿಂಗ್ ಮತ್ತು ಬಿಜೆಪಿ ಆಡಳಿತವಿರುವ ಈ ಮಹಾನಗರ ಪಾಲಿಕೆಯ ಜೋಡಿ ತೋರಿಸಿಕೊಟ್ಟಿವೆ. ದೇಶದೆಲ್ಲೆಡೆ ಇಂತಹ ಬದಲಾವಣೆಗಳು ಬಂದರೆ, ಭಾರತ ಸಂಪೂರ್ಣ ಸ್ವಚ್ಛವಾಗುವ ದಿನಗಳು ದೂರವಿಲ್ಲ.

## ವಿಷಭರಿತ ಮಲೀನ ಕೆರೆಗಳ ಶುದ್ಧಿಗೆ ಸಾವಯವ ಪರಿಹಾರ

ಬೆಂಗಳೂರಿನ ಬೆಳ್ಳಂದೂರಿನ ಮಲೀನ ನೊರೆಭರಿತ ಕೆರೆ ಶುದ್ಧೀಕರಣಕ್ಕೆ ಮುಂಬಯಿ ಮೂಲದ ಗೀತಾಂಜಲಿ ಎನ್ವಿರ್ಟೆಕ್ ಎಂಬ ಸಂಸ್ಥೆ ಅಭಿವೃದ್ಧಿ ಪಡಿಸಿರುವ ಸಾವಯವ ಸೂಕ್ಷ್ಮಾಣು ಭರಿತ ದ್ರಾವಣದ ಬಳಕೆಯ ಮೂಲಕ ಪರಿಹಾರ ಕಂಡುಕೊಳ್ಳುವ ಹೊಸ ಪ್ರಯತ್ನಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಧರಿಸಿದೆ. ಸ್ವಚ್ಛ ಭಾರತ ಅಭಿಯಾನದಲ್ಲಿ ತೊಡಗಿಸಿಕೊಂಡ ಘನ ತ್ಯಾಜ್ಯ ನಿರ್ವಹಣಾ ತಜ್ಞ ರಾಗಿಣಿ ಜೈನ್ ಅವರ ನೇತೃತ್ವದಲ್ಲಿ ಅಗ್ನಿಶಾಮಕ ದಳದ ಟಿಲ್ಲರ್ ಗಳನ್ನು ಬಳಸಿ, ಈಗಾಗಲೇ ಸುಮಾರು 200 ಲೀಟರ್‌ಗಳಷ್ಟು ದ್ರಾವಣವನ್ನು ಸುರಿದಿದ್ದು, ಇನ್ನೂ 500 ಲೀಟರ್ ಗಳಷ್ಟು ದ್ರಾವಣವನ್ನು ಬಳಸುವ ಯೋಜನೆ ಇದೆ. ಸಿಂಪಡಿಸಿದ, ಒಂದು ಗಂಟೆಯಲ್ಲೇ ಸುಮಾರು 6 ಕೋಟಿ ಯಷ್ಟು ವೃದ್ಧಿ ಬೆಳೆದು ನಿಲ್ಲುವ ದ್ರಾವಣದಲ್ಲಿನ ಸೂಕ್ಷ್ಮಾಣುಗಳು ಗಂಧಕ, ರಂಜಕ ಮತ್ತು ಮೀಥೇನ್ ಭರಿತ ನೊರೆಯಲ್ಲಿನ ವಿಷ ಹಾಗೂ ದುರ್ವಾಸನೆಯನ್ನು ಹೋಗಲಾಡಿಸಿ, ಈ ಮಾಲಿನ್ಯದ ಸಮಸ್ಯೆಗೆ ಪರಿಹಾರ ಒದಗಿಸಲಿದೆ ಎಂದು ಅವರು ವಿವರಿಸಿದರು.

ದ್ರಾವಣದ ತಯಾರಿಕೆ ಮತ್ತು ಅದರಲ್ಲಿ ಬಳಸಿದ ಸೂಕ್ಷ್ಮಾಣುವಿನ ಕುರಿತು ಹೆಚ್ಚಿನ ಮಾಹಿತಿ ಪ್ರಸ್ತುತ ಪ್ರಕಟಿಸಿಲ್ಲವಾದರೂ, ಇದೊಂದು ಪ್ರಮಾಣೀಕರಿಸಿದ ಪೇಟೆಂಟೆಡ್ ತಂತ್ರಜ್ಞಾನ ಎಂದು ಹೇಳಲಾಗಿದೆ. ರಾಸಾಯನಿಕ ವಿಷ ಭರಿತ ಕೆರೆ ನೀರಿನ ಶುದ್ಧೀಕರಣ ಸಫಲವಾದರೆ, ಈ ಸಾವಯವ ವಿಧಾನ ಬಳಸಿ ಕಲುಷಿತಗೊಂಡಿರುವ ಹಲವು ಜಲಮೂಲಗಳನ್ನು ಸಂರಕ್ಷಿಸುವ ಕಾಯಕ ಸುಲಭ ಸಾಧ್ಯವಾಗಬಲ್ಲದು.

## ಗೆಲುವಿನ ಬಯಕೆ...



ಬದುಕಿನಲ್ಲಿ ಎಲ್ಲರಿಗೂ ಗೆಲುವಿನ ಬಯಕೆ ಇರುವಂಥದ್ದೇ! ಆದರೆ ಅಂದುಕೊಂಡಿದ್ದು ನಡೆಯದಿದ್ದಾಗ ದುಃಖಿಸುವ ಅಗತ್ಯವಿಲ್ಲ. ನಮ್ಮ ದಾರಿಯಲ್ಲಿ ಎಲ್ಲಿ ಎಡವಿದ್ದೇವೆ ಎಂದು ಆತ್ಮಾವಲೋಕನ ಮಾಡಿಕೊಂಡು ಮುನ್ನಡೆದರೆ ಯಶಸ್ಸು ಲಭಿಸುತ್ತದೆ ಎಂದು ಅನುಭವಿಗಳು ಹೇಳುತ್ತಾರೆ.

ಲೆನ್ಸ್‌ಕಾರ್ಟ್ ಇ-ಕಾಮರ್ಸ್ ಕಂಪೆನಿ ಸ್ಥಾಪನೆ ಮಾಡಿದ ಸಾಧಕ ಪೀಯುಶ್ ಬನ್ಸಾಲ್ ಅವರ ಸಾಧನೆಯ ಕಥೆ ಇದು. ದೆಹಲಿಯ ಪೀಯುಶ್ ಬನ್ಸಾಲ್ ಐಐಎಂ ಬೆಂಗಳೂರಿನಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಪದವಿ ಬಳಿಕ ಹಲವು ಕಂಪೆನಿಗಳ ಕಚೇರಿಗೆ ಕೆಲಸಕ್ಕಾಗಿ ಎಡತಾಕಿದರೂ ಕೆಲಸ ಮಾತ್ರ ಸಿಗಲಿಲ್ಲ. ಕೊನೆಗೆ ಮೈಕ್ರೋ ಸಾಫ್ಟ್ ಕಂಪೆನಿಯಲ್ಲಿ ಕೆಲಸ ದೊರೆಯಿತು. ನ್ಯೂಯಾರ್ಕ್‌ಗೆ ತೆರಳಿದ ಪೀಯುಶ್ ಎರಡು ವರ್ಷ ಕೆಲಸ ಮಾಡಿದರು. ಅದ್ಯಾಕೋ ಆ ವೃತ್ತಿ ತೃಪ್ತಿಕೊಡಲಿಲ್ಲ. ಭಾರತಕ್ಕೆ ಹಿಂತಿರುಗಿ ಏನಾದರೂ ಸಾಧನೆ ಮಾಡಬೇಕು, ಸ್ಟಾರ್ಟ್‌ಅಪ್ ಆರಂಭಿಸಬೇಕು ಎಂದು ಯೋಚಿಸಿದರು. ಇದಕ್ಕೆ ಮನೆಯವರ ಬೆಂಬಲ ದೊರಕಿದ ಕೂಡಲೇ ಕೆಲಸಕ್ಕೆ ರಾಜೀನಾಮೆ ಕೊಟ್ಟು ಭಾರತಕ್ಕೆ ಮರಳಿದರು.

ಸಾಫ್ಟ್‌ವೇರ್ ಬಗ್ಗೆ ತಿಳಿದಿದ್ದ ಪೀಯುಶ್ ಆನ್‌ಲೈನ್ ಮಾರ್ಕೆಟಿಂಗ್ ಅಥವಾ ಇ-ಕಾಮರ್ಸ್ ಕಂಪೆನಿ ಸ್ಥಾಪಿಸುವ ಉದ್ದೇಶ ಹೊಂದಿದ್ದರು. ಆದರೆ ಅದರ ಸ್ವರೂಪ ಮತ್ತು ಉದ್ದೇಶದ ಬಗ್ಗೆ ಯೋಚಿಸಿರಲಿಲ್ಲ. ಪುಸ್ತಕ, ಮಕ್ಕಳ ಆಟಿಕೆಗಳು, ಔಷಧಿ, ಸಿದ್ಧ ಆಹಾರದ ಬಗ್ಗೆ ಯೋಚಿಸಿದರಾದರೂ ಇವುಗಳ ಮಾರುಕಟ್ಟೆ ವಹಿವಾಟು ಕಂಡು ಹಿಂದೆ ಸರಿದರು. ಒಂದು ದಿನ ತನ್ನ ಅಜ್ಜಿಗೆ ಕನ್ನಡಕ ತರಲು ಹೋಗಿದ್ದಾಗ ಹೊಳೆದ ಆಲೋಚನೆಯೇ ಕನ್ನಡಕಗಳ ಇ-ಕಾಮರ್ಸ್ ಕಂಪೆನಿ ಸ್ಥಾಪನೆ! ಕೇವಲ ಆರು ತಿಂಗಳು ಸಿದ್ಧತೆ ಮಾಡಿಕೊಂಡು 2010ರಲ್ಲಿ ಲೆನ್ಸ್‌ಕಾರ್ಟ್ ಇ-ಕಾಮರ್ಸ್ ಕಂಪೆನಿ ಆರಂಭಿಸಿದರು. ಫ್ಯಾಷನ್, ಸನ್‌ಗ್ಲಾಸ್, ಕಣ್ಣಿನ ತೊಂದರೆ ಸೇರಿದಂತೆ ಎಲ್ಲ ಮಾದರಿಯ ಹಾಗೂ ವಿವಿಧ ಬ್ರ್ಯಾಂಡ್‌ಗಳ ಕನ್ನಡಕಗಳು ಇಲ್ಲಿ ಲಭ್ಯ. ಮಾಸಿಕ 1.5 ಲಕ್ಷಕ್ಕೂ ಹೆಚ್ಚು ಕನ್ನಡಕಗಳು ಮಾರಾಟವಾಗುತ್ತಿವೆ. ಸುಮಾರು ನೂರಾರು ಕೋಟಿ ರೂಪಾಯಿ ವಹಿವಾಟು ನಡೆಯುತ್ತಿದ್ದು, ವಾರ್ಷಿಕ 150 ಕೋಟಿ ರೂಪಾಯಿ ವರಮಾನ ಬರುತ್ತಿದೆ ಎಂದು ಪೀಯುಶ್ ಹೇಳುತ್ತಾರೆ. ಜೀವನದಲ್ಲಿ ರಿಸ್ಕ್ ತೆಗೆದುಕೊಂಡಾಗ ಮಾತ್ರ ಏನಾದರೂ ಸಾಧಿಸಲು ಸಾಧ್ಯ ಎನ್ನುತ್ತಾರೆ ಇವರು.

ಪುಂಗವ PUNGAVA
# 74, Ranga Rao Road, Shankarapuram, Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00


REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10th and 25th of every Month REG.NO.CPMG/KA/BGS/102/2015-17
FORTNIGHTLY 15-9-2017



# ಡೋಕ್ಲಮ್ ವಿವಾದ – ಭಾರತದ ಮೇಲುಗೈ

ಟಿಬೇಟ್ (ಚೀನಾದ ವಶದಲ್ಲಿದೆ) ಮತ್ತು ಭೂತಾನ್ ದೇಶಗಳ ಗಡಿಯಲ್ಲಿರುವ ಡೋಕ್ಲಮ್ ಎನ್ನುವ ಪ್ರದೇಶದಲ್ಲಿ ಚೀನಾ ರಸ್ತೆ ನಿರ್ಮಿಸಲು ಪ್ರಯತ್ನಿಸುವ ಮೂಲಕ ಭೂತಾನ್ ಮತ್ತು ಚೀನಾ ನಡುವೆ ವಿವಾದವೇರ್ಪಟ್ಟಿತು. ಈ ಪ್ರದೇಶವು ಭೂತಾನಿಗೆ ಸೇರಿದ್ದಾದರೂ ತನಗೇ ಸೇರಿದ್ದೆಂದು ಚೀನಾ ವಾದಿಸುತ್ತಿತ್ತು. ಹಾಗಾಗಿ, ಅಲ್ಲಿ ಯಾವ ನಿರ್ಮಾಣ ಕಾರ್ಯಗಳನ್ನೂ ಎರಡೂ ದೇಶಗಳು ಮಾಡಬಾರದೆಂದು ಭೂತಾನ್ ಮತ್ತು ಚೀನಾ ನಡುವೆ ಒಪ್ಪಂದವಾಗಿತ್ತು. ಈ ಪ್ರದೇಶವು ಸಿಕ್ಕಿಂ ಗಡಿಗೆ ಸಮೀಪವಿರುವ ಸ್ಥಳ. ಭಾರತದ ಮಟ್ಟಿಗೆ ಸಿಕ್ಕಿಂ ಗಡಿ ಪ್ರದೇಶವು ಅತ್ಯಂತ ಮಹತ್ವದ್ದು. ಸಿಕ್ಕಿಂ ರಾಜ್ಯದ ದಕ್ಷಿಣಕ್ಕೆ ನೇಪಾಳ ಮತ್ತು ಬಾಂಗ್ಲಾದೇಶಗಳ ಗಡಿಗಳ ನಡುವೆ ಇರುವ ಚಿಕನ್ ನೆಕ್ ಪ್ರದೇಶ ಕೇವಲ 27 ಕಿ.ಮೀ ಉದ್ದವಿದೆ. ಈ ಪ್ರದೇಶವನ್ನು ಚೀನಾ ಆಕ್ರಮಿಸಿಕೊಂಡು ಬಿಟ್ಟರೆ, ಈಶಾನ್ಯದ 7 ರಾಜ್ಯಗಳನ್ನು ರಸ್ತೆಯ ಮೂಲಕ ತಲಪುವುದು ಅಸಾಧ್ಯವಾಗಿ ಬಿಡುತ್ತದೆ. ಡೋಕ್ಲಮ್‌ನಲ್ಲಿ ಚೀನಾ ರಸ್ತೆ ನಿರ್ಮಿಸುತ್ತಿರುವುದು ಈ ಚಿಕನ್ ನೆಕ್ ಪ್ರದೇಶವನ್ನು ಸದಾ ಕಾಲಕ್ಕೂ ಅಪಾಯಕ್ಕೆ ದೂಡುವಂತೆ ಮಾಡುತ್ತಿತ್ತು.

ಇಲ್ಲಿ ಚೀನೀ ಸೈನಿಕರು ರಸ್ತೆ ನಿರ್ಮಾಣಕ್ಕೆ ಕೈಹಾಕಿದ ಕೂಡಲೇ ಭಾರತೀಯ ಸೈನಿಕರು ಭೂತಾನಿನೊಳಗೆ ಪ್ರವೇಶಿಸಿ, ಅದಕ್ಕೆ ತಡೆಯೊಡ್ಡಿದರು. ಆ ಪ್ರದೇಶವು ತನಗೆ ಸೇರಿದ್ದು ಮತ್ತು ತನಗೆ ಅಲ್ಲಿ ರಸ್ತೆ ನಿರ್ಮಿಸಲು ಹಕ್ಕಿದೆ ಎಂದು ಚೀನಾ ಹೇಳಿಕೆ ನೀಡಿತು. ತನ್ನ ಪ್ರದೇಶಕ್ಕೆ ಭಾರತೀಯ ಸೈನಿಕರು ಅತಿಕ್ರಮಿಸಿರುವರು ಮತ್ತು ತನ್ನ ಪ್ರದೇಶವನ್ನು ಕಾಪಾಡಿಕೊಳ್ಳಲು ಯುದ್ಧಕ್ಕೂ ಸಿದ್ಧ ಎಂದು ಸರ್ಕಾರಿ ನಿಯಂತ್ರಿತ ಚೀನೀ ಮಾಧ್ಯಮ ಪ್ರಕಟಿಸಿತು.




ಭಾರತವು 1962ರ ಯುದ್ಧದಿಂದ ಪಾಠ ಕಲಿತಿಲ್ಲವೆಂದು ಕಾಣುತ್ತಿದೆ, 2017ರಲ್ಲಿ ಅದಕ್ಕೆ ಮರೆಯಲಾಗದ ಪಾಠ ಕಲಿಸುವುದಾಗಿ ಚೀನೀ ಮಾಧ್ಯಮ ಎಚ್ಚರಿಕೆ ನೀಡಿತು. ತಾನು ಭಾರತಕ್ಕಿಂತ ಬಲಿಷ್ಠ, ಭಾರತವು ತನ್ನ ಕೆಲಸ ನೋಡಿಕೊಂಡು ತೆಪ್ಪಗಿರಲಿ ಎಂದು ಬರೆಯಿತು. ಚೀನಾ ಇಷ್ಟೆಲ್ಲಾ ಬೆದರಿಕೆಗಳನ್ನೊಡ್ಡಿದರೂ ಭಾರತ ಸರಕಾರ ಮಾತ್ರ ಯಾವುದೇ ಹೇಳಿಕೆಗಳನ್ನು ನೀಡಲಿಲ್ಲ. ಭಾರತದ ವಿದೇಶಾಂಗ ಮಂತ್ರಾಲಯವು ಚೀನಾದೊಡನೆ ಮಾತುಕತೆ ನಡೆಸಿತು. ಇದೇ ಸಮಯದಲ್ಲಿ ಚೀನಾ ಡೋಕ್ಲಮ್ ಪ್ರದೇಶದಲ್ಲಿ ಸೇನಾ ಜಮಾವಣೆ ಮಾಡುತ್ತಿರುವುದು, ಯುದ್ಧ ಸಾಮಾಗ್ರಿಗಳನ್ನು ಅಲ್ಲಿಗೆ ಸಾಗಿಸುತ್ತಿರುವುದು ವರದಿಯಾಯಿತು. ಇದೆಲ್ಲವೂ ಭಾರತದ ಮೇಲೆ ಒತ್ತಡ ಹೇರಲೆಂದೇ ಚೀನಾ ಮಾಡಿತ್ತು. ಇದಕ್ಕೂ ಭಾರತ ಸರಕಾರ ಜಗ್ಗಲಿಲ್ಲ. ಭಾರತವೂ ಗಡಿ ಪ್ರದೇಶದಲ್ಲಿನ ಹಳ್ಳಿಗಳಲ್ಲಿನ ಜನರನ್ನು ಅಲ್ಲಿಂದ ತೆರವುಗೊಳಿಸುತ್ತಿರುವುದು ವರದಿಯಾಯಿತು. ಅಂದರೆ, ಚೀನಾ ಯುದ್ಧಕ್ಕೆ ಇಳಿದರೆ ಭಾರತ ಅದಕ್ಕೆ ಸಿದ್ಧ ಎನ್ನುವ ಸಂದೇಶ ಚೀನಾಗೆ ರವಾನೆಯಾಯಿತು. ಒಟ್ಟಿನಲ್ಲಿ ಭಾರತ ಬಗ್ಗುವುದಿಲ್ಲ ಎನ್ನುವುದು ಚೀನಾಗೆ ಚೆನ್ನಾಗಿ ಅರ್ಥವಾಯಿತು.


ಕಡೆಗೆ ಚೀನಾವೇ ಬಗ್ಗಬೇಕಾಯಿತು. ಎರಡೂ ದೇಶಗಳು ತಮ್ಮ ಸೈನ್ಯಗಳನ್ನು ಡೋಕ್ಲಮ್ ಇಂದ ಹಿಂತೆಗೆಯಬೇಕೆಂದು ನಿರ್ಧಾರವಾಗಿದೆ ಎಂದು ಭಾರತದ ವಿದೇಶಾಂಗ ಸಚಿವಾಲಯವು ಪತ್ರಿಕಾ ಹೇಳಿಕೆ ನೀಡಿತು. ಭಾರತದ ಸೈನ್ಯವು ವಾಪಸ್ ಹೋಗುತ್ತಿರುವುದೂ ವರದಿಯಾಯಿತು. ಚೀನಾ ಸೈನ್ಯವನ್ನು ಹಿಂತೆಗೆಯುವುದನ್ನು ನಿಶ್ಚಯಿಸಿಲ್ಲ ಎಂದು ಚೀನಾ ಮಾಧ್ಯಮಗಳು ಬರೆದವು. ಅದಕ್ಕೆ ಭಾರತವೇನೂ ಪ್ರತಿಕ್ರಿಯಿಸಲಿಲ್ಲ. ಚೀನಾ ಮಾಧ್ಯಮಗಳ ವರದಿ ಬಂದ ಎರಡು ದಿನಗಳೊಳಗಾಗಿ ಚೀನಾ ಸೈನ್ಯವನ್ನು ಮತ್ತು ರಸ್ತೆ ನಿರ್ಮಾಣಕ್ಕೆ ತೆಗೆದುಕೊಂಡು ಹೋಗಿದ್ದ ಸರಂಜಾಮುಗಳೆಲ್ಲವನ್ನೂ ಅಲ್ಲಿಂದ ವಾಪಸ್ ತೆಗೆದುಕೊಂಡು ಹೋಯಿತು.

ಒಂದು ಸಣ್ಣ ಗುಂಡನ್ನೂ ಹಾರಿಸದೆ ಭಾರತವು ಚೀನಾದಂತಹ ದೈತ್ಯ ಶಕ್ತಿ ಬಗ್ಗುವಂತೆ ಮಾಡಿದ್ದು ಭಾರತೀಯರೂ ಹೆಮ್ಮೆ ಪಡುವಂತಹ ಸಂಗತಿಯಾಗಿದೆ. ಆದರೆ, ಚೀನಾವನ್ನು ನಂಬುವಂತಿಲ್ಲ ಎನ್ನುವುದನ್ನು ಸದಾ ನೆನಪಿನಲ್ಲಿಡಬೇಕು. ನಾವು ಮೈಮರೆತಿರುವಾಗ ಚೀನಾ ಏನಾದರೂ ಮಾಡಬಹುದು. ಹೀಗಾಗಿ, ಭಾರತವು ಸದಾ ಎಚ್ಚರದಲ್ಲಿರಬೇಕು.

# ವಾಯ್ಸ್ ಆಫ್ ಇಂಡಿಯಾ ಸರಣಿಯ ಮೂರು ಪುಸ್ತಕಗಳ ಬಿಡುಗಡೆ

ಸಾಹಿತ್ಯ ಸಿಂಧು ಪ್ರಕಾಶನದ ವಾಯ್ಸ್ ಆಫ್ ಇಂಡಿಯಾ ಸರಣಿಯ ಮೂರು ಪುಸ್ತಕಗಳು (ಹಮೀದ್ ದಳವಾಯಿ ಅವರ ಸೆಕ್ಯುಲರ್ ಭಾರತದಲ್ಲಿ ಮುಸ್ಲಿಂ ರಾಜಕಾರಣ, ಸೀತಾರಾಮ್ ಗೋಯಲ್ ಅವರ ಹಿಂದೂ ವೀರಗಾಥೆ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯ) ಇತ್ತೀಚೆಗೆ ಬಿಡುಗಡೆಗೊಂಡವು. ಸ್ವಾತಂತ್ರ್ಯಾನಂತರದ ಭಾರತದಲ್ಲಿ ರಾಜಕೀಯ ಅಗತ್ಯಗಳನ್ನು ಪೂರೈಸಿಕೊಳ್ಳಲು ಸತ್ಯವನ್ನು ಮರೆಮಾಚಿ ಅಸತ್ಯಗಳನ್ನು ಸೃಷ್ಟಿಸಿ ಅದನ್ನು ಪ್ರಚಾರ ಮಾಡುವ ತಂತ್ರಗಾರಿಕೆ ವ್ಯವಸ್ಥಿತವಾಗಿ ನಡೆದುಕೊಂಡು ಬಂದಿದೆ. ಈ ದುಸ್ಥಿತಿಯಲ್ಲೂ ಸತ್ಯವನ್ನು ಸಂಶೋಧಿಸಿ ಓದುಗರ ಮುಂದಿಡುವ ಪ್ರಯತ್ನವನ್ನು ರಾಮಸ್ವರೂಪ್, ಸೀತಾರಾಮ ಗೋಯಲ್ ಮುಂತಾದ ಲೇಖಕರು ಮಾಡಿದರು. ಸರ್ಕಾರದ ಭಯದಿಂದಲೂ ಇನ್ನಾವುದೋ ಕಾರಣಗಳಿಂದ ಹೀಗೆ ಈ ರಚನೆಗೊಂಡ ಪುಸ್ತಕಗಳನ್ನು ಪ್ರಕಟಿಸಲು ಯಾವುದೇ ಪ್ರಕಾಶಕರು ಮುಂದೆ ಬರಲಿಲ್ಲ. ಜನರಿಗೆ ಸತ್ಯವನ್ನು ತಿಳಿಸುವ ಸಲುವಾಗಿ ಈ ಸಂಶೋಧಕ ಲೇಖಕರೆಲ್ಲ ಸೇರಿ ಪ್ರಾರಂಭಿಸಿದ ಪ್ರಕಾಶನ ಸಂಸ್ಥೆಯೇ 'ವಾಯ್ಸ್ ಆಫ್ ಇಂಡಿಯಾ' ಪ್ರಕಾಶನ ಸಂಸ್ಥೆ. ಈ ಇಂಗ್ಲಿಷ್ ಪುಸ್ತಕಗಳನ್ನು ಕನ್ನಡಕ್ಕೆ ತರುವ ಕಾರ್ಯವನ್ನು ಬೆಂಗಳೂರಿನ ಸಾಹಿತ್ಯ ಸಿಂಧು ಪ್ರಕಾಶನ ನಡೆಸುತ್ತಿದೆ. ಈ ಸರಣಿಯಲ್ಲಿ ಈಗಾಗಲೇ 10 ಪುಸ್ತಕಗಳು ಕನ್ನಡಕ್ಕೆ ಅನುವಾದಗೊಂಡು ಮಾರುಕಟ್ಟೆಯಲ್ಲಿ ಲಭ್ಯವಿದ್ದು, ಈ ಸಾಲಿಗೆ ಇದೀಗ ಮೂರು ಪುಸ್ತಕಗಳು ಸೇರ್ಪಡೆಗೊಂಡಿವೆ.

## ಸೆಕ್ಯುಲರ್ ಭಾರತದಲ್ಲಿನ ಮುಸ್ಲಿಂ ರಾಜಕಾರಣ





ಮುಸ್ಲಿಂ ಕೋಮುವಾದವು ಭಾರತದ ಮುಸ್ಲಿಂ ಮಾನಸಿಕತೆಯನ್ನು ರೂಪಿಸಿದ ವಿಧಾನ ಮತ್ತು ಅದರ ಐತಿಹಾಸಿಕ ಹಿನ್ನೆಲೆಯನ್ನು ಈ ಪುಸ್ತಕವು ನಮ್ಮ ಮುಂದಿಟ್ಟಿದೆ. ಹಳೆಯ ಗೊಡ್ಡು ವಿಚಾರಗಳಿಂದ, ಪದ್ಧತಿಗಳಿಂದ ಮತ್ತು ಕೋಮುವಾದಿ ನಾಯಕರ ಪ್ರಭಾವಗಳಿಂದ ಮೊದಲು ಮುಸ್ಲಿಮರನ್ನು ಮುಕ್ತಗೊಳಿಸಬೇಕು. ಆಗ ಮಾತ್ರ ಅವರ ಪ್ರಗತಿ ಸಾಧ್ಯ. ಪ್ರತ್ಯೇಕ ಉರ್ದು ಶಾಲೆಗಳು ಹೋಗಿ, ಎಲ್ಲರಿಗೂ ಕ್ಷೇತ್ರೀಯ ಭಾಷೆಗಳಲ್ಲಿ ಸಮಾನ ಪಠ್ಯಕ್ರಮದ ಶಿಕ್ಷಣ ಲಭಿಸಬೇಕು. ಇದರಿಂದ ಮುಸ್ಲಿಂ ಪ್ರತ್ಯೇಕತೆಯು ಕೊನೆಗೊಂಡು, ಅವರಿಗೆ ವಿಶಾಲ ಸಮಾಜದೊಡನೆ ಬೆರೆಯುವ, ಹೊಸ ಬೆಳಕಿನಲ್ಲಿ – ಹೊಸ ವಾತಾವರಣದಲ್ಲಿ ಮುಕ್ತವಾಗಿ ಉಸಿರಾಡಿ ವಿಹರಿಸುವ ಅವಕಾಶಗಳು ದೊರೆಯುತ್ತವೆ. ಎಲ್ಲರ ಜೊತೆಗೆ ಪ್ರಗತಿಯನ್ನು ಸಾಧಿಸಬೇಕು, ಎಂಬ ಆಕಾಂಕ್ಷೆ ಅವರಲ್ಲಿ ಮೂಡಲು ಸಹಾಯವಾಗುತ್ತದೆ. ಸಮಾನ ವ್ಯವಹಾರ, ವಿಚಾರ, ಏಕರಾಷ್ಟ್ರೀಯ ಭಾವನೆ ಆಸೆ ಆಕಾಂಕ್ಷೆಗಳ ಒಂದೇ ರಾಷ್ಟ್ರೀಯ ಸಮಾಜವು ಇವೆಲ್ಲ ಬದಲಾವಣೆಗಳಿಂದ ರೂಪುಗೊಳ್ಳಲು ಸಾಧ್ಯವಿದೆ ಎಂಬ ಆಶಯವನ್ನು ತಮ್ಮ ಚಿಂತನೆಗಳ ಮೂಲಕ ಹಮೀದ್ ದಲವಾಯಿ ಅವರು ಈ ಪುಸ್ತಕದಲ್ಲಿ ಪ್ರತಿಪಾದಿಸಿದ್ದಾರೆ.

ಒಟ್ಟಾರೆಯಾಗಿ ಈ ಪುಸ್ತಕದಲ್ಲಿ ನಮಗೆ ಭಾರತದ ಮುಸ್ಲಿಂ ಕೋಮುವಾದದ ಸಮಸ್ಯೆಯ ಚಿಂತನಶೀಲ ಚಿತ್ರಣ ದೊರೆಯುತ್ತದೆ.

**ಮೂಲ ಲೇಖಕರು :** ಹಮೀದ್ ದಲವಾಯಿ
**ಕನ್ನಡಾನುವಾದ :** ಚಂದ್ರಶೇಖರ ಭಂಡಾರಿ
**ಬೆಲೆ :** ರೂ. 140.00

## ಹಿಂದೂ ವೀರಗಾಥೆ




ಬ್ರಿಟಿಷರು ಕಮ್ಯೂನಿಸ್ಟರು ರೂಪಿಸಿರುವ ನಮ್ಮ ಶಾಲಾ–ಕಾಲೇಜುಗಳ ಪಠ್ಯಕ್ರಮ ಹೇಗಿದೆಯೆಂದರೆ, ಕಳೆದ ಎರಡೂವರೆ ಸಹಸ್ರ ವರ್ಷಗಳಿಂದ ನಮ್ಮ ಮೇಲೆ ವಿದೇಶೀ ದಾಳಿಕೋರರಿಂದ ಆಕ್ರಮಣವಾಗುತ್ತಲೇ ಇದೆ ಮತ್ತು ನಮ್ಮ ದೇಶ ಬರೀ ಸೋಲುತ್ತಲೇ ಬಂದಿದೆ. ನಮ್ಮಲ್ಲಿ ಎದಿರೇಟು ನೀಡುವ ಕ್ಷಾತ್ರತೇಜಸ್ಸಾಗಲೀ – ವೀರರಾಗಲೀ ಇಲ್ಲವೇ ಇಲ್ಲ,ಎನ್ನುವಂತಿದೆ. ಇತ್ತೀಚೆಗಂತೂ ಆಕ್ರಮಣಕಾರಿಗಳನ್ನೇ ಭಾರತ ಭಾಗ್ಯವಿಧಾತರು, ಇಲ್ಲಿಗೆ ಸಂಸ್ಕೃತಿ, ಸಮಾನತೆಗಳನ್ನು ತಂದವರು ಎಂದು ವೈಭವೀಕರಿಸು ಹುನ್ನಾರ ಪ್ರಾರಂಭವಾಗಿದೆ.

ಆದರೆ ದಾಖಲೆಗಳು–ಆಧಾರಗಳು, ಭಾರತದ ರಾಜಮಹಾರಾಜರುಗಳ ಅದ್ಭುತ ಪ್ರತಿರೋಧದ–ಹೋರಾಟದ ವೀರಗಾಥೆಯನ್ನೇ ಹೇಳುತ್ತವೆ. ಸಾಮಾನ್ಯ ಯುಗದ 636 ರಿಂದ 1,206ರ ವರೆಗಿನ 570 ವರ್ಷಗಳ ಅವಧಿಯ, ವಾಯುವ್ಯ ಭಾರತದ ಸಿಂಧ್ – ಕಾಬೂಲ್ ಮುಂತಾದ ರಾಜ್ಯಗಳ ಹಿಂದೂ ವೀರರ ಸತ್ಯಸಂಗತಿಗಳನ್ನು ಹುಸಿ–ಇತಿಹಾಸಕರರು ಬೆಳಕಿಗೆ ತಂದೇ ಇಲ್ಲ. ಅಂತಹ ಅಪರೂಪದ ದಾಖಲೆಗಳ ಉದ್ಗ್ರಂಥ ಈ 'ಹಿಂದೂ ವೀರಗಾಥೆ'.

**ಲೇಖಕರು :** ಸೀತಾರಾಮ ಗೋಯಲ್
**ಕನ್ನಡಾನುವಾದ :** ಮಾಲಾ ಮಂಜುನಾಥ್
**ಬೆಲೆ :** ರೂ. 75.00

## ಅಭಿವ್ಯಕ್ತಿ ಸ್ವಾತಂತ್ರ್ಯ




ಅಭಿವ್ಯಕ್ತಿ ಸ್ವಾತಂತ್ರ್ಯ ಪ್ರಜಾಪ್ರಭುತ್ವ, ಮತ–ಧರ್ಮಗಳ ಸ್ವಾತಂತ್ರ್ಯ ಮುಂತಾದವು ಬಹಳ ಅದ್ಭುತವಾದ ಸಾಮಾಜಿಕ–ರಾಜಕೀಯ ಪರಿಕಲ್ಪನೆಗಳು. ವಿದೇಶೀಯರ ಆಳ್ವಿಕೆಯ ಕಪ್ಪು–ಇತಿಹಾಸ ಮತ್ತು 1975ರ ತುರ್ತು ಪರಿಸ್ಥಿತಿಗಳ ಅಮೂಲಾಗ್ರ ವಿಮರ್ಶಾತ್ಮಕ ಅಧ್ಯಯನ ಹಾಗೂ ವಿಶ್ಲೇಷಣೆಗಳಿಂದ ಈ ಸಂಪತ್ತುಗಳ, ಈ ಮೌಲ್ಯಗಳ 'ಬೆಲೆ' ತಿಳಿಯುತ್ತದೆ. ನಮ್ಮ ಬಹು–ಆಯಾಮಗಳ ಅರಿವಿಗೂ ಕಾರಣವಾಗುತ್ತದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಭಾಗವಾಗಿಯೇ ವಾಕ್ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯ, ಲೇಖನ ಸ್ವಾತಂತ್ರ್ಯಗಳು ಮುಖ್ಯವಾಗುತ್ತವೆ. ವಿದೇಶೀ ಆಳ್ವಿಕೆ ಮತ್ತು ತುರ್ತುಪರಿಸ್ಥಿತಿಗಳ ಅವಧಿಗಳ ಹೊರತಾಗಿಯೂ ಅಭಿವ್ಯಕ್ತಿ ಸ್ವಾತಂತ್ರ್ಯವು ಅಪಾಯದಲ್ಲಿ ಸಿಲುಕುವುದು ನಿಜವಾಗಿಯೂ ಭಯಾನಕ. ಅಂತೆಯೇ ಎಲ್ಲ ಬಗೆಯ ಸ್ವಾತಂತ್ರ್ಯಗಳು ನಮಗಿವೆ ಎಂಬ ಭ್ರಮೆಯಲ್ಲಿ, ಬಹುಪಾಲು ಜನ ನಾವೆಲ್ಲ ತೇಲಾಡುವುದು ಇನ್ನಷ್ಟು ಭಯಾನಕ. ಇಂತಹ ಆಘಾತಕರಿ ವಿಚಾರಗಳನ್ನು–ದಾಖಲೆಗಳನ್ನು ಸೀತಾರಾಮ ಗೋಯಲ್ ಅವರ ಈ ಪುಸ್ತಕ ನಮ್ಮ ಮುಂದೆ ಅನಾವರಣಗೊಳಿಸುತ್ತದೆ.

**ಲೇಖಕರು :** ಸೀತಾರಾಮ ಗೋಯಲ್
**ಕನ್ನಡಾನುವಾದ :** ಕೃಷ್ಣ ವಿ.
**ಬೆಲೆ :** ರೂ. 225.00

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ: ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.